ಸಂಪುಟ 01 । ಸಂಚಿಕೆ 106 । ಬುಧವಾರ 04 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ರದರ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ರಾಷ್ಟ್ರೀಯ ಸುರಕ್ಷತಾ ದಿನ

ರಾಷ್ಟ್ರೀಯ ಸುರಕ್ಷತಾ ದಿನ (National Safety Day) ವನ್ನು ಪ್ರತಿ ವರ್ಷ ಮಾರ್ಚ್ 4 ರಂದು ಆಚರಿಸಲಾಗುತ್ತದೆ. ಕೆಲಸದ ಸ್ಥಳಗಳು, ಸಾರ್ವಜನಿಕ ಸ್ಥಳಗಳು ಮತ್ತು ದೈನಂದಿನ ಜೀವನದಲ್ಲಿ ಸುರಕ್ಷತಾ ಕ್ರಮಗಳ (ಅಗ್ನಿ, ರಸ್ತೆ, ಆರೋಗ್ಯ) ಕುರಿತು ಜಾಗೃತಿ ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ. 1965 ರಲ್ಲಿ ನ್ಯಾಷನಲ್ ಸೇಫ್ಟಿ ಕೌನ್ಸಿಲ್ (ಓಖಅ) ಸ್ಥಾಪನೆಯ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ

2) ಹೋಳಿ ಹಬ್ಬ

ಪಂಚಾಂಗದ ಪ್ರಕಾರ ಫೆಬ್ರವರಿ ಅಂತ್ಯ ಮತ್ತು ಮಾರ್ಚ್ ಮಧ್ಯದ ನಡುವೆ ಫಾಲ್ಗುಣದ ಪೂರ್ಣಿಮೆಯ (ಹುಣ್ಣಿಮೆಯ ದಿನ) ಸಂಜೆಯಿಂದ ಹೋಳಿಯನ್ನು ಆಚರಿಸಲಾಗುತ್ತದೆ. ಸದರಿ ವರ್ಷ 2026ರ ಮಾರ್ಚ್ 3ರಂದು ಮಂಗಳವಾರ ಹೋಳಿಕಾ ದಹನ ಆಚರಿಸಲಾಗುತ್ತದೆ. ಮರು ದಿನ ಮಾರ್ಚ್ 4ರಂದು ಬುಧವಾರ ರಂಗ್ವಾಲಿ ಹೋಳಿ ಆಚರಿಸಲಾಗುತ್ತದೆ.

ಸುಭಾಷಿತ

ಶತಮೂರ್ಖ ಕೂಡ ತನ್ನ ಹೃದಯಕ್ಕೆ
ಹತ್ತಿರವಾದ ಕೆಲಸವನ್ನು ಸಾಧಿಸಬಲ್ಲ.
ಆದರೆ ಮಾಡುವ ಕೆಲಸವನ್ನು ತನ್ನ ಅಭಿರುಚಿಗೆ
ತಕ್ಕಂತೆ ರೂಪಿಸುವವನು ಮಾತ್ರ ಬುದ್ಧಿವಂತ.

ಸ್ವಾಮಿ ವಿವೇಕಾನಂದ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಮಧ್ಯಪ್ರಾಚ್ಯದಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರಲು ಹೊರಟ 10 ವಿಮಾನಗಳು

ನವದೆಹಲಿ: ಇರಾನ್-ಇಸ್ರೇಲ್ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಸಿಲುಕಿರುವ ಭಾರತೀಯರನ್ನು ವಾಪಸ್ ಕರೆತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ಸಂಭಾವ್ಯ ವಾಯುಪ್ರದೇಶಗಳ ಮೂಲಕ ಭಾರತೀಯರನ್ನು ಕರೆತರಲು ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇಂಡಿಗೋ ಏರ್‌ಲೈನ್ಸ್ ನ 10 ವಿಶೇಷ ವಿಮಾನಗಳು ಇಂದು ಜೆದ್ದಾಗೆ ತೆರಳಿ ಭಾರತೀಯರನ್ನು ಕರೆತರಲು ಉದ್ದೇಶಿಸಿವೆ ಎಂದು ಸಚಿವಾಲಯ ತಿಳಿಸಿದೆ. ಜೆದ್ದಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯೊಂದಿಗೆ ಇಂಡಿಗೋ ಸಂಪರ್ಕದಲ್ಲಿದೆ. ಯಾವ ವಾಯುಮಾರ್ಗದ ಮೂಲಕ ಕಾರ್ಯಾಚರಣೆ ನಡೆಸಬಹುದು ಎಂಬ ಬಗ್ಗೆ ಸಮಾಲೋಚನೆ ನಡೆಸಲಾಗು ತ್ತಿದೆ. ಅಲ್ಲಿ ಸಿಲುಕಿರುವ ಪ್ರಯಾಣಿಕರ ಸುರಕ್ಷಿತ ವಾಪಸಾತಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ವಿಮಾನಗಳನ್ನು ಕಳುಹಿಸಲಾಗುವುದು.

ವಿದೇಶಿ ವಿಮಾನಯಾನ ಸಂಸ್ಥೆಗಳು ಮತ್ತು ಭಾರತೀಯ ದೂತಾವಾಸ ಕಚೇರಿಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.ಪರ್ಯಾಯ ವಾಯುಮಾರ್ಗಗಳ ಮೂಲಕ ವಿಮಾನ ಸಂಚಾರನಿರ್ಬಂಧಿತ ವಾಯುಪ್ರದೇಶದ ಬದಲಿಗೆ ಪರ್ಯಾಯ ಮಾರ್ಗಗಳ ಮೂಲಕ ದೀರ್ಘ ಹಾಗೂ ಅತಿ ದೀರ್ಘ ದೂರದ ವಿಮಾನ ಸೇವೆಗಳನ್ನು ಹಂತ ಹಂತವಾಗಿ ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಿಮಾನಗಳು ಮತ್ತು ಸಿಬ್ಬಂದಿಯ ಮರುಸ್ಥಾಪನೆ ಕಾರ್ಯವೂ ಪ್ರಗತಿಯಲ್ಲಿ ಇದೆ ಎಂದು ಸಚಿವಾಲಯ ತಿಳಿಸಿದೆ.ಭಾರತ ಮತ್ತು ಗಲ್?ಫ ರಾಷ್ಟ್ರಗಳ ನಡುವೆ ಸಂಚರಿಸುವ ವಿದೇಶಿ ವಿಮಾನ ಸಂಸ್ಥೆಗಳೂ ಮಿತ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಎಲ್ಲ ವಿಮಾನಯಾನ ಸಂಸ್ಥೆಗಳಿಗೂ ಪ್ರಯಾಣಿಕರೊಂದಿಗೆ ಪಾರದರ್ಶಕವಾಗಿ ಮಾಹಿತಿ ಹಂಚಿಕೊಳ್ಳುವಂತೆ ಸೂಚಿಸಲಾಗಿದೆ.

ಪ್ರಯಾಣದ ಸಮಯ ಮರುನಿಗದಿ ಸೇರಿದಂತೆ ನಿಯಮಾನುಸಾರ ಸೇವೆಗಳನ್ನು ಒದಗಿಸುವಂತೆ ಸೂಚಿಸಲಾಗಿದೆ. ಪ್ರಯಾಣಿಕರು ವಿಮಾನ ನಿಲ್ದಾಣಕ್ಕೆ ಹೊರಡುವ ಮೊದಲು ತಮ್ಮ ವಿಮಾನಗಳ ಸ್ಥಿತಿಯನ್ನು ಸಂಬಂಧಿತ ವಿಮಾನಯಾನ ಸಂಸ್ಥೆಗಳ ಅಧಿಕೃತ ಮೂಲಗಳಿಂದ ಪರಿಶೀಲಿಸಿಕೊಳ್ಳುವಂತೆ ಸಲಹೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯ ಬಳಿಕ ಈ ನಿರ್ಧಾರಕ್ಕೆ ಬರಲಾಯಿತು. ನಾಗರಿಕ ವಿಮಾನಯಾನ ಕಾರ್ಯದರ್ಶಿ ಸಮೀರ್ ಕುಮಾರ್ ಸಿನ್ಹಾ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು ಎಂದು ಸಚಿವಾಲಯ ತಿಳಿಸಿದೆ.

ಗುರುವಿನ ತುಲಾಭಾರ ಭಾರತೀಯ ಸಂಸ್ಕೃತಿಯ ಪ್ರತೀಕ: ಕೊಡೆಕಲ್ಲ ಶ್ರೀ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಗುರುವಿಗೆ ಭಕ್ತರು ತುಲಾಭಾರ ಸೇವೆಯನ್ನು ಮಾಡುವುದು ಭಾರತೀಯ ಶ್ರೇಷ್ಠ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ಕೊಡೆಕಲ್ಲ ದುರದುಂಡೇಶ್ವರ ಮಠದ ಮ.ನಿ.ಪ್ರ.ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಷ.ಬ್ರ.ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವ ಅಂಗವಾಗಿ ಲಕ್ಕುಂಡಿ ಗ್ರಾಮದ ಅಪ್ಪಸಾಹೇಬಗೌಡ ಭೀಮನಗೌಡ ಪಾಟೀಲ ಕುಟುಂಬದ ಸದಸ್ಯರು ಹಮ್ಮಿಕೊಂಡ ಪೂಜ್ಯ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಅವರ ತುಲಾಭಾರ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಗುರುವಿಗೆ ತುಲಾಭಾರ ಮಾಡುವುದರ ಮೂಲಕ ನೀವು ನಿಮ್ಮ ಭವದ ಭಾರವನ್ನು ಅವರ ಮೂಲಕ ಇಳಿಸಿಕೊಂಡಿದ್ದೀರಿ ಇಂಥಹ ಪುಣ್ಯದ ಕಾರ್ಯವನ್ನು ಮಾಡಿದಂತಹ ಅಪ್ಪಸಾಹೇಬಗೌಡ ಪಾಟೀಲರಿಗೆ ಅಭಿನಂದಿಸುತ್ತೇನೆ ಎಂದರು.

ಸಾಸನೂರ- ತುಂಬಗಿ ಪೂಜ್ಯ ಮಹಾಂತಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ದೇವದುರ್ಗದ ಕಪಿಲ ಸಿದ್ದರಾಮ ಶಿವಾಚಾರ್ಯರು,ಜ್ಯೋತಿಷ್ಯ ರತ್ನ ರಾಮಲಿಂಗಯ್ಯ ಮಹಾಸ್ವಾಮಿಗಳು, ಪರದೇಶಿ ಮಠದ ಶಿವಯೋಗಿ ಶಿವಾಚಾರ್ಯರು, ಕಲ್ಮಠದ ಸಿದ್ದಲಿಂಗ ಶಿವಾಚಾರ್ಯರು, ಮಾತೋಶ್ರೀ ಸಾವಿತ್ರಿ ಅಮ್ಮನವರು,ಡಾ.ಗುರುಲಿಂಗಯ್ಯ ಹಿರೇಮಠ, ಶರಣಗೌಡ ಇಬ್ರಾಹಿಂಪೂರ,ರವಿಧಣಿ ದೇಶಮುಖ,ಎಸ್.ಎಸ್.ಹಾವರಗಿ,ಪುರಾಣಿಕ ರಾಚಯ್ಯ ಹಿರೇಮಠ ಹಾಗೂ ಗ್ರಾಮದ ಗಣ್ಯರು ಹಿರಿಯರು ಉಪಸ್ಥಿತರಿದ್ದರು.

ಮಸ್ಕಿ ಹಳೆಯ ಬಸ್ ನಿಲ್ದಾಣದಲ್ಲಿ ಬಸ್‌ಗಳ ನಿಲುಗಡೆಗೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಪಟ್ಟಣದ ಹಳೆಯ ಬಸ್ ನಿಲ್ದಾಣದಲ್ಲಿ ಮೊದಲಿನಂತೆ ಸಾರಿಗೆ ಬಸ್ ನಿಲುಗಡೆ ಮಾಡಬೇಕು, ಇದರಿಂದ ಜನರಿಗೆ ಬಹಳಷ್ಟು ತೊಂದರೆ ಆಗಿದೆ ಈ ಹಿಂದೆ ಕೂಡ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಪತ್ರ ಕೊಟ್ಟರು ಯಾವುದೇ ಪ್ರಯೋಜನವಾಗಿಲ್ಲ,

ಹಳೆ ಬಸ್ ನಿಲ್ದಾಣದಲ್ಲಿ ಬಸ್ ಗಳು ನಿಲ್ಲುತ್ತಲ್ಲ ಇದರಿಂದಾಗಿ ಮಕ್ಕಳು, ಮಹಿಳೆಯರು, ಅಂಗವಿಕಲರು ಹಾಗೂ ವಯೋವೃದ್ಧರಿಗೆ ತುಂಬಾ ತೊಂದರೆಯಾಗುತ್ತಿದ್ದು, ಅದಕ್ಕಾಗಿ ಪ್ರಯಾಣಿಕರ ಅನುಕೂಲಕ್ಕಾಗಿ ಹಳೆ ಬಸ್ ನಿಲ್ದಾಣದಲ್ಲಿ ಬಸ್ ನಿಲ್ಲಿಸುವಂತೆ ಆಗ್ರಹಿಸಿ ಸ್ಥಳೀಯ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಮಸ್ಕಿ ಶಾಸಕ ಆರ್ ಬಸನಗೌಡ ತುರುವಿಹಾಳ ಅವರಿಗೆ, ತಹಸೀಲ್ದಾರ್ ಅವರಿಗೆ, ಪುರಸಭಾ ಅಧ್ಯಕ್ಷರಿಗೆ,

ಸರ್ಕಲ್ ಇನ್ಸ್ಪೆಕ್ಟರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದರು. ಈ ಸಂದರ್ಭದಲ್ಲಿ ಕರವೇ ತಾಲೂಕ ಅಧ್ಯಕ್ಷರು ಆರ್ ಕೆ ನಾಯಕ, ಮಹೇಶ್ ನಂದಿಹಾಳ,ಬಸವರಾಜ ಬಾಳೇಕಾಯಿ, ಸಂತೋಷ್ ಬಳೆಗಾರ, ಕೇಶವ್ ಮೂರ್ತಿ ದಾಸರ, ಉಮಣ್ಣ ಹಳ್ಳಿ,ಮಲ್ಲಯ್ಯ ಬರಕೇರ್, ಬಸವರಾಜ್ ಸಜ್ಜನ್ ಹಾಗೂ ಇತರರು ಇದ್ದರು.

ಲಿಂಗಸುಗೂರು ಕೃಷಿ ಇಲಾಖೆಗೆ ವಾಹನ ಒದಗಿಸಲು ಅರ್ಜಿ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ಲಿಂಗಸುಗೂರು ಉಪ ಕೃಷಿ ನಿರ್ದೇಶಕರು-2ರ ಕಾರ್ಯಾಲಯದ ಸರಕಾರಿ ಕೆಲಸ ಕಾರ್ಯಗಳಿಗೆ ನಾಲ್ಕು ಚಕ್ರದ ಹವಾ ನಿಯಂತ್ರಿತ ವಾಹನವನ್ನು ಬಾಡಿಗೆ ಆದಾರದ ಒದಗಿಸಲು ಅರ್ಹ ಸಂಸ್ಥೆ ಅಥವಾ ಮಾಲೀಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಾಹನವು ಮಾಸಿಕ 2500.ಕಿ.ಮೀ. ಅಥವಾ 300 ಘಂಟೆಗಳಿಗೆ 40,000 ರೂ. (ಹವಾ ನಿಯಂತ್ರಿತ ವಾಹನಕ್ಕೆ) ಗರಿಷ್ಟ ಬಾಡಿಗೆ ಆಗಿರುತ್ತದೆ. ದಿನಾಂಕ:-01-04-2026 ರಿಂದ 31-03-2027 ಅವಧಿಗೆ ಒಂದು ಬೊಲೆರೊ/ ಶಿಪ್ಟಡಿಸೈರ್/ ಎರಿಟಿಗಾ ವಾಹನವನ್ನು (ಎಸಿ) ಅಧಿಕೃತ ಸರಕಾರಿ ಕೆಲಸಗಳಿಗಾಗಿ ಬೇಕಾಗಿದೆ. ಆಸಕ್ತ ವಾಹನಗಳ ಮಾಲೀಕರು ಮಾರ್ಚ್ 13ರೊಳಗಾಗಿ ನಿಗಧಿತ ನಮೂನೆ ಅರ್ಜಿಯನ್ನು ಪಡೆದು, ಮಾರ್ಚ್ 25ರ ಸಂಜೆ 5.30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಲಿಂಗಸುಗೂರಿನ ಉಪ ಕೃಷಿ ನಿರ್ದೇಶಕರು-2ರ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಭೇಟಿ ನೀಡಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ: 08537-258600ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಲಿಂಗಸುಗೂರಿನ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾತ್ಮರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯೋಣ: ಯಡಿಯಾಪೂರ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಮಹಾನ್ ಶಿವಶರಣೆ ಗುಡ್ಡಾಪುರದ ಶ್ರೀ ದಾನಮ್ಮ ದೇವಿಯ ಕುರಿತು 20 ದಿನಗಳವರೆಗೆ ಪುರಾಣ ಆಲಿಸಿದ್ದೇವೆ ಇದನ್ನು ಕೇವಲ ಕೇಳುವುದಕ್ಕೆ ಸೀಮಿತಗೊಳಿಸದೇ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕಾಗಿದೆ ಎಂದು ಬಿಜೆಪಿ ಮುಖಂಡ ಬಸನಗೌಡ ಪಾಟೀಲ ಯಡಿಯಾಪೂರ ಹೇಳಿದರು.

ತಾಲೂಕಿನ ನಾವದಗಿ ಗ್ರಾಮ ಬ್ರಹನ್ಮಠದ ಷ.ಬ್ರ. ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವ ನಿಮಿತ್ಯ ಹಮ್ಮಿಕೊಂಡ ದಾನಮ್ಮ ದೇವಿ ಪುರಾಣ ಮಂಗಲ,ಗುರುವಂದನೆ ಹಾಗೂ ಧರ್ಮ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಚಬನೂರಿನ ಜ್ಯೋತಿಷ್ಯ ರತ್ನ ರಾಮಲಿಂಗಯ್ಯ ಮಹಾಸ್ವಾಮಿಗಳು ಮಾತನಾಡಿ ಐಹಿಕ ಜೀವನದ ಅತಿಯಾದ ಮೋಹದಿಂದ ಬದುಕಿನ ಉದ್ದೇಶವನ್ನು ಮರೆಯಬೇಡಿ, ಗುರುವಿನ ಮಾರ್ಗದರ್ಶನದಲ್ಲಿ ನಡೆದು ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಿ, ಪೂಜ್ಯ ರಾಜೇಂದ್ರ ಶಿವಾಚಾರ್ಯರ ಧರ್ಮ ಕಾರ್ಯಗಳಿಗೆ ಇದೇ ರೀತಿಯ ಸಹಕಾರ ಮುಂದೆಯೂ ಇರಲಿ ಎಂದರು.

ಸಾನಿಧ್ಯ ವಹಿಸಿದ ದೇವದುರ್ಗದ ಕಪಿಲ ಸಿದ್ದರಾಮ ಶಿವಾಚಾರ್ಯರು ಹಾಗೂ ಕೊಡೆಕಲ್ಲದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಮಾತನಾಡಿ ಭಕ್ತಿಗೆ ಇನ್ನೊಂದು ಹೆಸರೇ ನಾವದಗಿ ಗ್ರಾಮ.ಪರ್ವತೇಶ್ವರ ಮಠ ಶ್ರೇಷ್ಠ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ, ಇದರ ಪೀಠಾಧಿಪತಿಗಳಾದ ರಾಜೇಂದ್ರ ಒಡೆಯರ್ ಅವರು ಸರಳ ಸಜ್ಜನ ಶರಣರು. ಈ ಭಾಗದ ಭಕ್ತರನ್ನು ಆಧ್ಯಾತ್ಮಿಕವಾಗಿ ಸಂಸ್ಕರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ನಿಮ್ಮೆಲ್ಲರ ಭಕ್ತಿ ಮತ್ತು ಪ್ರೀತಿ ಅವರ ಮೇಲೆ ಸದಾ ಇದೇ ರೀತಿಯಾಗಿರಲಿ ಎಂದರು.

ಲಕ್ಕುಂಡಿಯ ಶರಣ ಅಪ್ಪಸಾಹೇಬಗೌಡ ಭೀ.ಪಾಟೀಲ ಕುಟುಂಬದಿಂದ ರಾಜೇಂದ್ರ ಒಡೆಯರ್ ಶಿವಾಚಾರ್ಯರಿಗೆ ತುಲಾಭಾರ ಹಾಗೂ ಸರ್ವ ಪೂಜ್ಯರಿಂದ ವಿಶೇಷ ಗುರುವಂದನಾ ಕಾರ್ಯಕ್ರಮ ಜರುಗಿತು.ತುಂಬಗಿ-ಸಾಸನೂರ ಹಿರೇಮಠದ ಪೂಜ್ಯ ಮಹಾಂತಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ 20 ದಿನಗಳ ಕಾಲ ಸೇವೆ ಗೈದ ಮಹನೀಯರಿಗೆ ಶ್ರೀಮಠದಿಂದ ಗೌರವಿಸಲಾಯಿತು. ಶಾಲಾ ಮಕ್ಕಳು ವಿವಿಧ ಸಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು.ಷ.ಬ್ರ. ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಸಭೆಯ ಸಮ್ಮುಖ ವಹಿಸಿ ಆಶೀರ್ವಚನ ನೀಡಿದರು.

ಸಾಹಿತಿ ಬಸವರಾಜ ಗೊರಜಿ ಹಾಗೂ ಡಾ.ಸೋಮಶೇಖರಯ್ಯ ಹಿರೇಮಠ ಕಾರ್ಯಕ್ರಮ ನಿರ್ವಹಿಸಿದರು. ವೇದಿಕೆ ಕಾರ್ಯಕ್ರಮ ಮುನ್ನ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ಗುರು ಪರ್ವತೇಶ್ವರರ ಭಾವಚಿತ್ರ ಹಾಗೂ ಧರ್ಮ ಗ್ರಂಥದ ಭವ್ಯ ಮೆರವಣಿಗೆ ನಡೆಯಿತು. ದೇವರ ಹಿಪ್ಪರಗಿ ಪರದೇಶಿ ಮಠದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು, ಕಲ್ಮಠದ ಸಿದ್ದಲಿಂಗ ಮಹಾಸ್ವಾಮಿಗಳು, ಮಾತೋಶ್ರೀ ಸಾವಿತ್ರಿ ಅಮ್ಮನವರು ಸಮ್ಮುಖ ವಹಿಸಿದ್ದರು. ಕಾರ್ಯಕ್ರಮದಲ್ಲಿ ಡಾ.ಗುರುಲಿಂಗಯ್ಯ ಹಿರೇಮಠ, ಸಿ.ಸಿ.ಕರಡಕಲ್, ಶರಣಗೌಡ ಇಬ್ರಾಹಿಂಪೂರ, ರವಿಧಣಿ ದೇಶಮುಖ, ಎಸ್.ಎಸ್.ಹಾವರಗಿ, ಪುರಾಣಿಕ ರಾಚಯ್ಯ ಹಿರೇಮಠ, ಗ್ರಾಮದ ಗಣ್ಯರು, ಹಿರಿಯರು, ನಾವದಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಶ್ರೀ ಮಠದ ಭಕ್ತರು ಇದ್ದರು.

ಸಾಹಿತ್ಯ ಸಿಂಚನ

ನಿವೇದನೆ..!

ಗೆಳೆಯಾ ನೀನೆಷ್ಟು ದಿನ
ಸದಾ ನನ್ನೊಡನೆ ಇರುವೆ
ಎಂಬುದಲ್ಲವೊ ಮುಖ್ಯ.!

ನೀನು ಇರುವಷ್ಟು ದಿನವು
ಹೇಗಿರುವೆ ಎಂಬುದಷ್ಟೇ
ನನಗದು ಅಕ್ಷರಶಃ ಹೃದ್ಯ.!

ಕ್ಷಣ-ಕ್ಷಣವೂ ಕೆರಳಿಸುತ
ಅಡಿಗಡಿಗು ನರಳಿಸಿ ನಿತ್ಯ
ದಿನಗಳೆಷ್ಟಿದ್ದರೇನು ಪ್ರಿಯ.!

ಅರಳಿಸಿ ಆಸರೆಯಾಗುತ
ಅನುರಾಗ ಅನುರಣಿಸುತ
ನೀನಿದ್ದ ಕ್ಷಣಗಳಷ್ಟೆ ಸತ್ಯ.!

ನೀನು ಕೊಟ್ಟಿದ್ದು ಕನಸಿದ್ದು
ಕೊಸರಿದ್ದು ಕನವರಿಸಿದ್ದು
ಕೂಡಿ ಕಳೆದದ್ದಲ್ಲ ಮುಖ್ಯ.!

ನೀನು ಕರಗಿದ್ದು ಕಾದಿದ್ದು
ಕೊರಡಾಗಿಸದೆ ಕೊನರಿದ್ದು
ಕಡೆಗುಳಿಸಿ ಹೋದದ್ದೆ ಸತ್ಯ.!

ನೀನೆಷ್ಟು ವರ್ಷಗಳ ಕಾಲ
ನೆನಪಾಗಿ ಅವರಿಸಿಕೊಳ್ಳುವೆ
ಎಂಬುದಲ್ಲವೋ ಮುಖ್ಯ.!
ನನ್ನಯಾ ಉಸಿರಿರುವತನಕ
ಅರೆಕ್ಷಣವು ಮರೆಯದಂತೆ
ಎದೆಯಲುಳಿವುದೇ ವೇದ್ಯ.!

ನಮ್ಮಿಬ್ಬರಾ ಉಸಿರಳಿದರೂ
ಹೆಸರು ಹಚ್ಚ ಚಿರಹಸಿರಾಗಿ
ಆವರಿಸಿರಬೇಕು ಇಳೆಯ.!

ಕಳೆದು ಹೋದರೂ ಕಾಲ
ಕಾಲವಾದರು ಬಂಧ ಜಾಲ
ಕಲ್ಪತರುವಾಗಲಿ ಹೃದಯ.!

ಎ.ಎನ್.ರಮೇಶ್.ಗುಬ್ಬಿ

ಮಾರ್ಚ್ 6ರಂದು ಕೊಪ್ಪಳದಲ್ಲಿ ವಾಕ್ ಇನ್ ಸಂದರ್ಶನ

ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮಾರ್ಚ್ 6ರಂದು ವಾಕ್ ಇನ್ ಸಂದರ್ಶನ ಆಯೋಜನೆ ಮಾಡಿದೆ. ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಈ ವಾಕ್ ಇನ್ ಸಂದರ್ಶನ ನಡೆಯಲಿದೆ. ಮಾರ್ಚ್ 6ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30ರ ತನಕ ಈ ವಾಕ್ ಇನ್ ಇಂಟರ್‌ವ್ಯೂವ್ ನಡೆಯಲಿದೆ.ಮೆಡ್‌ಪ್ಲಸ್ ಬೆಂಗಳೂರು ಸಂಸ್ಥೆಯು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನವನ್ನು ನಡೆಸಿ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಹುದ್ದೆಗಳು ಫಾರ್ಮಿಸ್ಟ್ (ರಜಿಸ್ರಡ್ ಫಾರ್ಮಿಸ್ಟ್ ಕೆಎಸ್‌ಪಿಸಿ ಇಂದ), ಫಾರ್ಮಿಸಿಯೇಡ್ (ಕನಿಷ್ಠ 2 ವರ್ಷ ಮೆಡಿಕಲ್ ಶಾಫ್‌ನಲ್ಲಿ ಅನುಭವ), ಕಸ್ಟಮರ್ ಸರ್ವಿಸ್ ಅಸೋಶಿಯೇಟ್ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಎಸ್.ಎಸ್.ಎಲ್.ಸಿ, ಪಿಯುಸಿ, ಡಿ-ಫಾರ್ಮ್, ಬಿ-ಫಾರ್ಮ್ ಇತರೆ ಪದವಿ (ಬಿಇ ಪದವಿ ಹೊರತು ಪಡಿಸಿ) ಅಭ್ಯರ್ಥಿಗಳು ನೇರ ಈ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಗಳಿಗೆ ಆಸಕ್ತ 18 ರಿಂದ 35 ವರ್ಷಗಳ ವಯೋಮಿತಿ ನಿಗದಿ ಮಾಡಲಾಗಿದೆ. ನಿರುದ್ಯೋಗಿ ಪುರುಷರು ಹಾಗೂ ಮಹಿಳೆಯರು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಎಲ್ಲಾ ಪ್ರಮಾಣ ಪತ್ರಗಳು 2 ಪ್ರತಿಗಳೊಂದಿಗೆ ಮತ್ತು ಆಧಾರ್ ಕಾರ್ಡ್ ಪ್ರತಿ, ಬಯೋಡಾಟಾ ಹಾಗೂ ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ಈ ವಾಕ್ ಇನ್ ಇಂಟರ್‌ವ್ಯೂವನಲ್ಲಿ ಭಾಗವಹಿಸಿ, ಉದ್ಯೋಗದ ನೆರವು ಪಡೆಯಬಹುದಾಗಿದೆ. ಉದ್ಯೋಕಾಂಕ್ಷಿಗಳು https://forms.gle/rSKrLmuqyH8RFgo29ಮೂಲಕರಿಜಿಸ್ಟರ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಸಂಪರ್ಕಿಸಿ.

ಕೇಂದ್ರ ರಾಜ್ಯ ಸರ್ಕಾರದ ಮಹಿಳಾ ವಿರೋಧಿ ನೀತಿ ಖಂಡಿಸಿ, ಮಾರ್ಚ್ 5 ರಂದು ವಿಧಾನಸೌಧಕ್ಕೆ ಚಲೋ..

ನೈಜ್ಯ ದೆಸೆ ನ್ಯೂಸ್

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳು ಮಹಿಳೆಯರ ಸಂಕಷ್ಟಗಳನ್ನು ತೀವ್ರ ಗೊಳಿಸಿದ್ದು, ಮಹಿಳೆಯರ ಬದುಕಿನ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿವೆ. ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ದೌರ್ಜನ್ಯ ಮುಕ್ತ ಬದುಕನ್ನು ಖಾತ್ರಿಗೊಳಿಸದೆ, ಪರಿಪೂರ್ಣ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಸರ್ಕಾರಗಳು ಅರ್ಥಮಾಡಿಕೊಂಡು ಪರಿಹಾರ ಒದಗಿಸುಬೇಕೆಂದು ಒತ್ತಾಯಿಸಿ ಮಾರ್ಚ್ 5 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ ವಿಧಾನಸೌಧ ಚಲೋ ಹಮ್ಮಿಕೊಂಡಿದ್ದು, ರಾಯಚೂರು ಜಿಲ್ಲೆಯಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾಧ್ಯಕ್ಷೆ ಶಕುಂತಲಾ ಪಾಟೀಲ್ ಹೇಳಿದರು.

ಮಹಿಳಾ, ಕೂಲಿಕಾರ ವಿರೋಧಿ ವಿಬಿ ಗ್ರಾಮ್ ಜಿ

ಮಸೂದೆಗೆ ವಿರೋಧ, ಮನರೇಗಾ ಉಳಿಸಿ, ನಗರಕ್ಕೆ ಉದ್ಯೋಗ ಖಾತ್ರಿ ವಿಸ್ತರಿಸಿ, 200 ದಿನ ಕೆಲಸ, 600 ರೂಪಾಯಿ ಕೂಲಿಗೆ ಒತ್ತಾಯ.

ಮರ್ಯಾದೆಗೇಡು ಹತ್ಯೆಗಳ ತಡೆಗಾಗಿ ವಿಶೇಷ ಕಾನೂನು ಜಾರಿಗಾಗಿ, ಧರ್ಮಸ್ಥಳದಲ್ಲಿ ನಡೆದಿರುವ ಅತ್ಯಾಚಾರ, ಕೊಲೆ, ಅಸಹಜ ಸಾಹುಗಳ ಸಮಗ್ರ ತನಿಖೆಗಾಗಿ, ನ್ಯಾಯಮೂರ್ತಿ ವರ್ಮಾ ಸಮಿತಿ ಆಯೋಗದ ಹಾಗೂ ಉಗ್ರಪ್ಪ ಸಮಿತಿ ಶಿಫಾರಸ್ಸುಗಳ ಜಾರಿಗಾಗಿ, ನಿವೇಶನ ಹಾಗು ವಸತಿ ಸೌಲಭ್ಯಕ್ಕಾಗಿ, ಸಾಮಾಜಿಕ ಭದ್ರತಾ ಯೋಜನೆಯಡಿ ಮಾಸಿಕ ವೇತನವನ್ನು 5 ಸಾವಿರ ರೂ.ಗೆ ಹೆಚ್ಚಿಸಲು. ಸ್ವಸಹಾಯ ಗುಂಪುಗಳಿಗೆ ಶೇ.4ರ ಬಡ್ಡಿ ದರದಲ್ಲಿ 10 ಲಕ್ಷದವರೆಗೆ ದೀರ್ಘಾವಧಿ ಬ್ಯಾಂಕ್ ಸಾಲ ನೀಡಲು.

ಗ್ರಾಮ ಪಂಚಾಯತ ವ್ಯಾಪ್ತಿಯ ಸಂಜೀವಿನಿ ಒಕ್ಕೂಟಗಳಿಗೆ 1 ಕೋಟಿ ಹಣ ಬಿಡುಗಡೆ ಮಾಡಿ, ಒಕ್ಕೂಟ ಸದಸ್ಯರಿಗೆ ತರಬೇತಿ, ಕಚ್ಚಾ ವಸ್ತುಗಳನ್ನು ನೀಡಿ, ಮಾರುಕಟ್ಟೆ ವ್ಯವಸ್ಥೆ ಸರ್ಕಾರ ಒದಗಿಸಬೇಕು. ಮೈಕ್ರೋ ಫೈನಾನ್ಸ್ ಎಂಬ ಕರಾಳ ಸಾಲದ ಬಡ್ಡಿ ಚಕ್ರಬಡ್ಡಿಯಿಂದ ವಿಮುಕ್ತಿ ಮತ್ತು ಕಿರುಕುಳ ತಪ್ಪಿಸಲು ಒತ್ತಾಯಿಸಿ, ಇದೇ ತಿಂಗಳು 5ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ ವಿಧಾನಸೌಧ ಚಲೋ ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಯಚೂರು ಜಿಲ್ಲೆಯಿಂದ ಮಹಿಳೆಯರು ನಾಳೆ ಜಿಲ್ಲೆಯ ಎಲ್ಲಾ ತಾಲುಕಿನಿಂದ ಸಂಘಟನೆಯ ಮುಖಂಡರು ಸದಸ್ಯರು ಭಾಗವಹಿಸುತ್ತಿದ್ದಾರೆಂದು ಪತ್ರಿಕಾ ಪ್ರಕಟಣೆ ಮೂಲಕ ಜೆಎಂಎಸ್ ಸಂಘಟನೆಯ ಜಿಲ್ಲಾಧ್ಯಕ್ಷೆ ಶಕುಂತಲಾ ಪಾಟೀಲ್ ತಿಳಿಸಿದ್ದಾರೆ.

ಸ್ವಯಂ ಸೇವಕರೇ, ಸಮಾಜದ ನಾಯಕರು:: ಬೀರಪ್ಪ ಶಂಬೋಜಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು ತಾಲೂಕಿನ ಅಂಬಾಮಠ ಗ್ರಾಮದಲ್ಲಿ ನಡೆದ ನೊಬೆಲ್ ಪದವಿ ಮಹಾವಿದ್ಯಾಲಯ

ಸಿಂಧನೂರು ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ವಾರ್ಷಿಕ ವಿಶೇಷ ಶಿಬಿರದ 5 ನೇ ದಿನದ ವಿಶೇಷ ಉಪನ್ಯಾಸಕ ಕಾರ್ಯಕ್ರಮದಲ್ಲಿ ಕುಮಾರ್ ಮೌಲಸಾಬ್ ಇತಿಹಾಸ ಉಪನ್ಯಾಸಕರ ಅಧ್ಯಕ್ಷತೆಯಲ್ಲಿ ಶ್ರೀ ಬೀರಪ್ಪ ಶಂಬೋಜಿ ಚುಟುಕು ಸಾಹಿತ್ಯ ರಾಯಚೂರು ಜಿಲ್ಲಾ ಗೌರವ ಅಧ್ಯಕ್ಷರು ಭಾಗವಹಿಸಿ ಪರಿಸರ ಸಂರಕ್ಷಣೆಯಲ್ಲಿ ಯುವಕರ ಪಾತ್ರ ವಿಷಯದ ಅಡಿಯಲ್ಲಿ ಮಕ್ಕಳಿಗೆ ಪರಿಸರ ಮತ್ತು ಎನ್ ಎಸ್ ಎಸ್ ಒಂದನ್ನೊಂದು ಬಿಟ್ಟು ಇಲ್ಲ, ಹಾಗೂ ಮಾನವೀಯ ಮೌಲ್ಯ ಮತ್ತು ಜಾನಪದ ಸೊಗಡು ಸಮಾಜದ ಅವಿಭಾಜ್ಯ ಅಂಗಗಳು ಎಂದು ಮಾತನಾಡಿದರು, ಅತಿಥಿಗಳಾದ ಕಾಲೇಜಿನ ಕುಮಾರ್ ಮರಿಸ್ವಾಮಿ ಆಂಗ್ಲ ಉಪನ್ಯಾಸಕರು ಮಕ್ಕಳ ಸಾಮಾಜಿಕ ಸೇವಾ ಕಾರ್ಯದ ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಪ್ರಶಂಸಿದರು. ಕೃಷ್ಣನ್ ರಾಥೋಡ್ ಅರ್ಥ ಶಾಸ್ತ್ರ ಉಪನ್ಯಾಸಕರು ಮಾತನಾಡಿ ಸೇವಾ ಕಾರ್ಯ ಮೆಚ್ಚಿ, ಪರಿಸರ ಮತ್ತು ಸಮಾಜದ ಸಾಮ್ಯತೆಯನ್ನು ತಿಳಿಸಿದರು ಈ ಸಂಧರ್ಭದಲ್ಲಿ ಕನ್ನಡ ಉಪನ್ಯಾಸಕರು ಉಪಸ್ತಿತರಿದ್ದರು ಕಾರ್ಯಕ್ರಮವನ್ನು ಬಸವಣ್ಣ ತಂಡದ ಬಸವರಾಜೇಶ್ವರಿ ಮತ್ತು ಹಂಪಯ್ಯ ನಿರೂಪಿಸಿದರು ರಾಧಿಕಾ ಸ್ವಾಗತಿಸಿದರು ಅಕ್ಕಮಹಾದೇವಿ ಪ್ರಾರ್ಥಿಸಿದರು ಅಶ್ವಿನಿ.ಬಿಕಾಂ ವಂದಿಸಿದರು.

ಸೈಯದ್ ಮಿನ್ಹಾಜ್ ಉಲ್ ಹಸನ್ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕ

ನೈಜ್ಯ ದೆಸೆ ನ್ಯೂಸ್

ಮಾನವಿ: ಭಾಷುಮಿಯ ಸಾಹುಕಾರ್ ಪ್ರಥ-'ಮ ದರ್ಜೆ ಪದವಿ ಕಾಲೇಜ್ ಮಾನ್ವಿಯ ಸಹ ಪ್ರಾಧ್ಯಾಪಕರಾದ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ರಾಯಚೂರು ಜಿಲ್ಲಾ ಘಟಕದ ಜಿಲ್ಲಾ ಉಪಾಧ್ಯಕ್ಷರಾಗಿ ನೇಮಿಸಿರುವುದು ಶಿಕ್ಷಣ ಕ್ಷೇತ್ರದ ಸಾಧನೆಗೆ ದೊರೆತ ಮತ್ತೊಂದು ಮೆಚ್ಚುಗೆ. ಅವರ ಸರಳ ವ್ಯಕ್ತಿತ್ವ, ಸಂಘಟನಾ ನಿಪುಣ-ತೆ ಮತ್ತು ನೌಕರರ ಹಿತಚಿಂತನೆಯು ಈ ಹುದ್ದೆಗೆ ಅವರನ್ನು ಸೂಕ್ತರನ್ನಾಗಿ ಮಾಡಿದೆ. ನೌಕರರ ಸಮಸ್ಯೆಗಳನ್ನು

ಆಡಳಿತ ಮಟ್ಟದಲ್ಲಿ ಸಮರ್ಥವಾಗಿ ಮಂಡಿಸುವುದು, ಸದಸ್ಯರ ಹಕ್ಕುಗಳ ಪರ ಹೋರಾಟ ನಡೆಸುವುದು ಹಾಗೂ ಸಂಘದ ಚಟುವಟಿಕೆಗಳನ್ನು ಚುರುಕುಗೊಳಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಲಿದ್ದಾರೆ. ಶಿಕ್ಷಣ ಮತ್ತು ಸಂಘಟನಾ ಸೇವೆಯನ್ನು ಸಮನ್ವಯಗೊಳಿಸಿ ಉತ್ತಮ ಆಡಳಿತ ಹಾಗೂ ಕಲ್ಯಾಣ ಕಾರ್ಯಗಳನ್ನು ಮುಂದುವರಿಸುವ ಅವರ ದೃಢಸಂಕಲ್ಪವು ಯುವ ನೌಕರ-ರಿಗೆ ಪ್ರೇರಣೆಯಾಗಲಿದೆ. ಈ ನೇಮಕವು ಮಾನ್ವಿ ತಾಲೂಕಿಗೆ ಗೌರವ ತಂದುಕೊಟ್ಟಿದ್ದು, ರಾಯಚೂರು ಜಿಲ್ಲಾ ಘಟಕದ ಕಾರ್ಯಕ್ಷಮತೆಯನ್ನು ಮತ್ತಷ್ಟು ಬಲಪಡಿಸಲಿದೆ.

ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಿದವರು: ಸುರೇಶ್ ಕುರ್ಡಿ, ತಾಲ್ಲೂಕ ಅಧ್ಯಕ್ಷರು, ಕ.ರಾ.ಸ.ನೌ.ಸಂಘ ಮಾನ್ವಿ ಹಂಪಣ್ಣ ಚಂಡೂರು, ಪ್ರಧಾನ ಕಾರ್ಯದರ್ಶಿ, ಕ.ರಾ.ಸ.ನೌ.ಸಂಘ ಮಾನ್ವಿ ಸುರೇಶ್ ಕುಮಾರ್, ಜಿಲ್ಲಾ ಉಪಾಧ್ಯಕ್ಷರು, ಕ.ರಾ.ಸ.ನೌ.ಸಂಘ ರಾಯಚೂರು ಜೆ.ಎಲ್. ಈರಣ್ಣ, ಪ್ರಾಂಶುಪಾಲರು, ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥ-'ಮ ದರ್ಜೆ ಕಾಲೇಜು ರಂಗನಾಥ್ ಅತ್ತನೂರು, ನಿರ್ದೇಶಕರು, ಕ.ರಾ.ಸ.ನೌ.ಸಂಘ ಮಾನ್ವಿ ಸೈಯದ್ ಮಿನ್ಹಾಜ್ ಉಲ್ ಹಸನ್ ಅವರಿಗೆ ಮತ್ತೊಮ್ಮೆ ಹೃತ್ಪೂರ್ವಕ ಅಭಿನಂದನೆಗಳು. ಅವರ ಮುಂದಿನ ಕಾರ್ಯಯಾತ್ರೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಹಿಂದೂಗಳ ಮೇಲೆ ದಾಳಿ ಖಂಡಿಸಿ ಗೃಹ ಸಚಿವರಿಗೆ ಮನವಿ ದಾಳಿಕೋರರನ್ನು ತಕ್ಷಣ ಬಂಧಿಸಬೇಕು :ದುರ್ಗಪ್ಪ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇ-ರಿಯಲ್ಲಿ ವಿಶ್ವಹಿಂದೂ ಪರಿಷತ್, ಬಜರಂಗದಳ ಹಾಗೂ ಹಿಂದೂ ಜನಜಾಗೃತಿ ಸಮಿತಿ ತಾಲೂಕು ಘಟಕದ ವತಿಯಿಂದ ರಾಜ್ಯದ ಗೃಹ ಸಚಿವ-ರಿಗೆ ಉಪ ತಹಶೀಲ್ದಾರ್ ವಿನಾಯಕರಾವ್ ಅವರ ಮೂಲಕ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಹಿಂದೂ ಜನಜಾಗೃತಿ ಸಮಿತಿ ತಾಲೂಕು ಘಟಕದ ಸಂಚಾಲಕ ದುರ್ಗಪ್ಪ, ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಹಿಂದೂ ಸಮುದಾಯದವರ ಮೇಲೆ, ಮನೆಗಳ ಮೇಲೆ ಹಾಗೂ ಶಾಂತಿಯುತವಾಗಿ ನಡೆಯುತ್ತಿರುವ ಮೆರವಣಿಗೆಗಳ ಮೇಲೆ

ದಾಳಿ ನಡೆಸುತ್ತಿರುವ ಘಟನೆಗಳು ಹೆಚ್ಚುತ್ತಿದ್ದು, ಇದು ಕಾನೂನು?ಸುವ್ಯವಸ್ಥೆಗೆ ಧಕ್ಕೆಯಾಗಿದೆ. ದಾಳಿಕೋರರನ್ನು ತಕ್ಷಣ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು. ಬಾಗಲಕೋಟೆ, ಚಿಕ್ಕಮಗಳೂರು, ಬೈಲೂರು, ಮುರುಡೇಶ್ವರ ಹಾಗೂ ಶಿವಮೊಗ್ಗದ ಊರಗಡೂರು ಪ್ರದೇಶಗಳಲ್ಲಿ ನಡೆದ ಘಟನೆಗಳ ಕುರಿತು ವಿಶೇಷ ತನಿಖಾ ತಂಡಗಳನ್ನು ರಚಿಸಿ ಆರೋಪಿಗಳನ್ನು ಪತ್ತೆ ಹಚ್ಚಬೇಕು. ಎನ್.ಐ.ಎ ಮೂಲಕ ಸಮಗ್ರ ತನಿಖೆ ನಡೆಸಬೇಕು. ಅಪರಾಧಿಗಳ ವಿರುದ್ಧ ಕೋಕಾ ಕಾಯಿದೆಯಡಿ ಕ್ರಮ ಕೈಗೊಳ್ಳಬೇಕು. ಹಿಂದೂಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಹಾಗೂ ಮೆರವಣಿಗೆಗಳ ವೇಳೆ ಹೆಚ್ಚುವರಿ ಭದ್ರತೆ ನೀಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ವಿಶ್ವಹಿಂದೂ ಪರಿಷತ್, ಬಜರಂಗದಳ ಸಂಚಾಲಕರಾದ ವಿಜಯಕುಮಾರ ಇಭ್ರಂಪುರ್, ರವಿಕುಮಾರ, ನಾಗಭೂಷಣ, ಮಂಜುನಾಥ ಗೌಡ, ಮಾರುತಿನಾಯಕ, ಮಲ್ಲಪ್ಪ, ನಿಂಗಪ್ಪ, ನಾಗರಾಜ್, ಸುರೇಶನಾಡಗೌಡ, ಸಂಗಮೇಶ, ಪ್ರಾಣೇಶ, ನಾಗರಾಜ ಶೆಟ್ಟಿ, ರಾಘವೇಂದ್ರ, ನಾಯಕ, ದತ್ತು, ನರಸಿಂಹ ಹೆಚ್., ಅಜಯ್, ಅಯ್ಯಪ್ಪ ಕೆ., ಆಂಜನೇಯ್ಯನಾಯಕ ಜಲ್ಲಿ ನೀರಮಾನ್ವಿ, ಶಾಂತಕುಮಾರ್, ಕೊಂದಯ್ಯ, ವೀರೇಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಆಯುಷ್ಮಾನ್ ಭಾರತ್ ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಪಡೆಯಲು ವ್ಯವಸ್ಥೆ.

ನೈಜ್ಯ ದೆಸೆ ನ್ಯೂಸ್

ಕಡು ಬಡವರು, ಆರ್ಥಿಕ ದುರ್ಬಲ ವರ್ಗದವರು, ದೈನಂದಿನ ದುಡಿಮೆಯಿಂದಲೇ ಜೀವನ ನಿರ್ವಹಣೆ ಮಾಡಬೇಕಾದ ಕುಟುಂಬಗಳು ತುರ್ತು ಶಸ್ತ್ರಚಿಕಿತ್ಸೆಗಾಗಿ ಗುಣಮಟ್ಟದ ಆರೋಗ್ಯ ಚಿಕಿತ್ಸೆಯನ್ನು ಪಡೆಯಲು ಸಹಾಯಕವಾಗುವಂತೆ ಭಾರತ ಸರಕಾರ ಹಾಗೂ ಕರ್ನಾಟಕ ಸರಕಾರ ಜಂ-ಟಿಯಾಗಿ ಹೃದಯ ಸಂಭಂದಿ, ಮೂತ್ರಪಿಂಡ, ಕಿಡ್ನಿ, ಕ್ಯಾನ್ಸರ್, ಸುಟ್ಟಗಾಯಗಳು, ಗಂಭಿರ ಅಪಘಾತ, ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಕೆ, ಮೊಣಕಾಲು, ಸೊಂಟದ ಬದಲಿ ಚಿಕಿತ್ಸೆಯು ಸೇರಿದಂತೆ ಗಂಭೀರ ಖಾಯಿಲೆಗಳಿಗೆ ಒಟ್ಟು 1650 ವಿವಿಧ ಚಿಕಿತ್ಸಾ ವಿಧಾನಗಳಿಗೆ ಉಚಿತ ಚಿಕಿತ್ಸೆಯನ್ನು ಆಯುಷ್ಮಾನ್ ಭಾರತ- ಪ್ರಧಾನಮಂತ್ರಿ ಜನಾರೋಗ್ಯ ಯೋಜನಾ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ (ಎಬಿ-

ಪಿಎಮ್‌ಜೆವೈ-ಸಿಎಮ್-ಆರ್‌ಕೆ) ಯೋಜನೆಯಡಿ ಜಿಲ್ಲೆಯ ಎಲ್ಲ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಸೇವೆ, ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಇದರ ಜೊತೆಗೆ ಜಿಲ್ಲೆಯಲ್ಲಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜನರಿಗೆ ಸೇವೆ ಒದಗಿಸಲು ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ನೋಂದಾಯಿತ ಖಾಸಗಿ ಆಸ್ಪತ್ರೆಗಳ ಮೂಲಕ ಫಲಾನುಭವಿಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು ಜನತೆಗೆ ವಿನಂತಿಸಿದ್ದಾರೆ ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರು ಖಡು ಜಿ. ಕುಮಾರ ನಾಯಕ ರವರ ಅಧ್ಯಕ್ಷತೆಯ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದೀಶಾ) ಸಭೆಯಲ್ಲಿ ಸೂಚಿಸಿದಂತೆ ಈಗಾಗಲೆ ಯೋಜನೆಯ ಕುರಿತು ಜನತೆಗೆ ಸಿಬ್ಬಂದಿಯವರ ಮೂಲಕ ಮಾಹಿತಿ ನೀಡಲಾಗುತ್ತಿದ್ದು,

ಜಿಲ್ಲೆಯ ಪ್ರತಿ ನಾಗರಿಕರು ಯೋಜನೆಯಡಿ ಸೌಲಭ್ಯ ಪಡೆದು ಆರ್ಥಿಕ ಹೊರೆಯಿಂದ ಮುಕ್ತರಾಗಲು ಸದುಪಯೋಗಕ್ಕಾಗಿ ವಿನಂತಿಸಿದ್ದಾರೆ.

ಯೋಜನೆಯಡಿ ತಜ್ಞತೆಯ ಚಿಕಿತ್ಸಾ ಸೌಲಭ್ಯ: ತುರ್ತು ಸಂದರ್ಭಗಳಲ್ಲಿ 169 ಚಿಕಿತ್ಸಾ ವಿಧಾನ ಸೌಲಭ್ಯ, ಗಂಭೀರ ಆರೋಗ್ಯ ಸಮಸ್ಯೆಗಳಿಗೆ 900 ಚಿಕಿತ್ಸಾ ವಿಧಾನ ಸೌಲಭ್ಯ, ದ್ವಿತೀಯ ಹಂತದ 254 ಚಿಕಿತ್ಸಾ ವಿಧಾನಗಳು, ಪ್ರಾಥಮಿಕ ಹಂತದ 40 ಚಿಕಿತ್ಸಾ ವಿಧಾನ ಸೇರಿದಂತೆ ಒಟ್ಟು 1650 ವಿವಿಧ ಚಿಕಿತ್ಸಾ ವಿಧಾನಗಳನ್ನು ಉಚಿತವಾಗಿ ಒದಗಿಸಲಾಗುವುದು. ಯೋಜನೆಯ ಫಲಾನುಭವಿಗಳು: ಬಿಪಿಎಲ್ ಕಾರ್ಡ್ ಹೊಂದಿದ ಕುಟುಂಬದ ಸದಸ್ಯರಿಗೆ ವಾರ್ಷಿಕ ರೂಪಾಯಿ 5 ಲಕ್ಷಗಳ ವರೆಗೆ ಉಚಿತ ಚಿಕಿತ್ಸಾ ವೆಚ್ಚ ಭರಿಸಲಾಗುವುದು. ಎಪಿಎಲ್ ಕಾರ್ಡ್‌ದಾರರಿಗೆ ವಾರ್ಷಿಕ ರೂಪಾಯಿ ಒಂದು ಲಕ್ಷ ಐವತ್ತು ಸಾವಿರಗಳ ವರೆಗೆ ಉಚಿತ ಚಿಕಿತ್ಸಾ ವೆಚ್ಚದ ಸೌಲಭ್ಯವಿದೆ. ಜಿಲ್ಲೆಯಲ್ಲಿ ತಜ್ಞತೆಯ ಅನುಸಾರ ಚಿಕಿತ್ಸೆ ನೀಡುವ ನೋಂದಾಯಿತ ವಿವಿಧ ಖಾಸಗಿ ಆಸ್ಪತ್ರೆಗಳ ವಿವರ.

ನೇಮಕಾತಿ ಪ್ರಕಟಣೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಡೆಪ್ಯೂಟಿ ಮ್ಯಾನೇಜರ್ ಮತ್ತು ಎವಿಪಿ ಹುದ್ದೆಗಳಿಗೆ 116 ಹುದ್ದೆಗಳಿಗೆ ಎಸ್‌ಬಿಐ ಎಸ್‌ಸಿಒ ನೇಮಕಾತಿ 2026 ಅಧಿಸೂಚನೆಯನ್ನು ಬಿಡುಗಡೆ ಮಾಡಿದೆ, ಸಹಾಯಕ ಉಪಾಧ್ಯಕ್ಷ (ಐಎಸ್ ಆಡಿಟ್) – ಗುತ್ತಿಗೆ; ಉಪ ವ್ಯವಸ್ಥಾಪಕ (ಐಎಸ್ ಆಡಿಟ್) – ನಿಯಮಿತ; ಉಪ ವ್ಯವಸ್ಥಾಪಕ (ಚಾರ್ಟರ್ಡ್ ಅಕೌಂಟೆಂಟ್ – ಆಂತರಿಕ ಲೆಕ್ಕಪರಿಶೋಧನೆ) – ನಿಯಮಿತ. ಆನ್‌ಲೈನ್ ಅರ್ಜಿ ವಿಂಡೋ 23–02–2026 ರಿಂದ 15–03–2026 ರವರೆಗೆ sbi.bank.in ನಲ್ಲಿ ಲಭ್ಯವಿದೆ. ಉದ್ಯೋಗ ಸ್ಥಳ ಮುಂಬೈ / ಹೈದರಾಬಾದ್ / ಮೊಬೈಲ್ ಡ್ಯೂಟಿ / ಸರ್ಕಲ್ ಆಡಿಟ್ ಕಚೇರಿಗಳು ಅಧಿಕೃತ ವೆಬ್‌ಸೈಟ್ https://sbi.co.in ಅಧಿಸೂಚನೆ ಬಿಡುಗಡೆ 23 ಫೆಬ್ರವರಿ 2026 ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭ 23 ಫೆಬ್ರವರಿ 2026 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15 ಮಾರ್ಚ್ 2026

ಕವಿತಾಳವನ್ನು ತಾಲ್ಲೂಕು ಕೇಂದ್ರವಾಗಿಸಲು ಒತ್ತಾಯ: ಮುಖ್ಯಮಂತ್ರಿಗಳಿಗೆ ಮನವಿ

ನೈಜ್ಯ ದೆಸೆ ನ್ಯೂಸ್

ಕವಿತಾಳ: ಕವಿತಾಳವನ್ನು ನೂತನ ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಬೇಕು ಎಂದು ಆಗ್ರಹಿಸಿ 'ಕವಿತಾಳ ತಾಲ್ಲೂಕು ಹೋರಾಟ ಸಮಿತಿ' ವತಿಯಿಂದ ಮಂಗಳವಾರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಕಳೆದ ನಾಲ್ಕು ದಶಕಗಳಿಂದ ನಡೆಯುತ್ತಿರುವ ಈ ಹೋರಾಟಕ್ಕೆ ತಾರ್ಕಿಕ ಅಂತ್ಯ ಹಾಡಬೇಕು ಎಂದು ಪಟ್ಟಣದ ಪ್ರಮುಖರು ಹಾಗೂ ನಾಗರಿಕರು ಸರ್ಕಾರದ ಮೇಲೆ ಒತ್ತಡ ಹೇರಿದ್ದಾರೆ.



ದಶಕಗಳ ಬೇಡಿಕೆ: ಹಿಂದೆ ಹೊಸ ತಾಲ್ಲೂಕುಗಳ ರಚನೆ ಸಂದರ್ಭದಲ್ಲಿ ಕವಿತಾಳ ಪಟ್ಟಣ–ಕ್ಕೆ ಅನ್ಯಾಯವಾಗಿದೆ ಎಂದು ಹೋರಾಟಗಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹತ್ತಾರು ಸಮಿತಿಗಳ ವರದಿಯಲ್ಲಿ ಕವಿತಾಳವನ್ನು ತಾಲ್ಲೂಕು ಕೇಂದ್ರ ಮಾಡಲು ಶಿಫಾರಸು ಮಾಡಿದ್ದರೂ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಇದುವರೆಗೆ ಅನುಷ್ಠಾನಕ್ಕೆ ಬಂದಿಲ್ಲ ಎಂದು ಮನವಿಯಲ್ಲಿ ದೂರಲಾಗಿದೆ. ಭೌಗೋಳಿಕ ಮತ್ತು ಆಡಳಿತಾತ್ಮಕ ಪೂರಕ ಅಂಶಗಳು ಕವಿತಾಳ ಪಟ್ಟಣವು ಭೌಗೋಳಿಕವಾಗಿ ವಿಸ್ತಾರವಾಗಿದ್ದು, ಐತಿಹಾಸಿಕ ಮತ್ತು ವಾಣಿಜ್ಯಕವಾಗಿ ಮಹತ್ವ ಪಡೆದಿದೆ. ಕವಿತಾಳ ಪಟ್ಟಣ ಹಾಗೂ ಸುತ್ತಮುತ್ತಲಿನ 11 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 69 ಹಳ್ಳಿಗಳಿಗೆ ಇದು ಕೇಂದ್ರ ಸ್ಥಾನವಾಗಿದೆ. ಅಂತರದ ಸಮಸ್ಯೆ: ಸಿರವಾರ ತಾಲ್ಲೂಕು ಕೇಂದ್ರವು ಈ ಭಾಗದ ಜನರಿಗೆ ಕಿಲೋಮೀಟರ್‌ಗಳಷ್ಟು ದೂರದಲ್ಲಿದೆ. ಕಂದಾಯ ದಾಖಲೆ, ಪ್ರಮಾಣ ಪತ್ರ ಹಾಗೂ ಸರ್ಕಾರಿ ಕೆಲಸಗಳಿಗಾಗಿ ಬಡ ರೈತರು ಮತ್ತು ಕೂಲಿ ಕಾರ್ಮಿಕರು ದಿನವಿಡೀ ಅಲೆಯಬೇಕಾದ ಪರಿಸ್ಥಿತಿ ಇದೆ. ಸೌಲಭ್ಯಗಳು: ಪಟ್ಟಣದಲ್ಲಿ ಈಗಾಗಲೇ ಪೊಲೀಸ್ ಠಾಣೆ ಸೇರಿದಂತೆ ಅಗತ್ಯ ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕು ಕೇಂದ್ರವಾದರೆ ಆಡಳಿತ ವ್ಯವಸ್ಥೆ ಜನರ ಮನೆಬಾಗಿಲಿಗೆ ತಲುಪಲು ಸಾಧ್ಯವಾಗುತ್ತದೆ. ಹೋರಾಟದ. ಎಚ್ಚರಿಕೆ "ಕವಿತಾಳವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವುದು ಕೇವಲ ಬೇಡಿಕೆಯಲ್ಲ, ಈ ಭಾಗದ ಲಕ್ಷಾಂತರ ಜನರ ಬದುಕಿನ ಅನಿವಾರ್ಯತೆಯಾಗಿದೆ. ಸರ್ಕಾರ ಕೂಡಲೇ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರನ್ನು ಒಗ್ಗೂಡಿಸಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು" ಎಂದು ಹೋರಾಟ ಸಮಿತಿಯ ಪದಾಧಿಕಾರಿಗಳು ಎಚ್ಚರಿಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಅಭಿನವ ಕಲ್ಮಠದ ಮಠದ ಸಿದ್ದಲಿಂಗ ಮಹಾಸ್ವಾಮಿಗಳು, ಕಿರಿಲಿಂಗಪ್ಪ, ನಿಂಗಪ್ಪ ತೋಳದ, ಬಲವಂತರಾಯ ಗೌಡ ವಟಗಲ್, ಬಸವರಾಜಪ್ಪ ಗೌಡ ವಟಗಲ್, ಅರಳಪ್ಪ ತುಪ್ಪದುರು, ಮಲ್ಲಪ್ಪ ಕಲ್ ಶೆಟ್ಟಿ, ಈರಪ್ಪ ಕೆಳಗೇರಿ, ಹುಚ್ಚಪ್ಪ ವಡವಟ್ಟಿ, ಶಿವಪ್ಪ ಯಕ್ಲಾಸಪುರ, ತಿಪ್ಪಯ್ಯ ಸ್ವಾಮಿ, ರಾಘವೇಂದ್ರ ಶೆಟ್ಟಿ, ಹುಚ್ಚಪ್ಪ ಬುಳ್ಳಾಪುರು, ಹೆಚ್ ಬಸವರಾಜ, ಹುಲ್ಲಗಪ್ಪ ಯಕ್ಲಾಸಪುರು, ಅಲ್ಲಮಪ್ರಭು ಕಲ್ ಶೆಟ್ಟಿ, ಮಲ್ಲಿಕಾರ್ಜುನ ಗೌಡ, ಲಿಂಗರಾಜ ಕಂದಗಲ್, ಪ ಅಮರೇಶ ಕಟ್ಟಿಮನಿ, ಯಾಕೋಬ ಕಡತಲ್, ಸಿದ್ದಪ್ಪ ತೋಳದ, ಮೌನೇಶ ಕೊಡ್ಲಿ, ಮೈಹೆಬೂಬ ಸಾಬ್, ಅಯ್ಯಪ್ಪ ನಿಲೋಗಲ್, ಮಹಾದೇವ ಬುಳ್ಳಾಪುರು, ಪರಶುರಾಮ ಕಬಾಡೆ, ಕಿರಿಲಿಂಗಪ್ಪ ಮ್ಯಾಗಳಮನಿ ಸೇರಿದಂತೆ ಕವಿತಾಳ ಹೊರಾಟ ಸಮಿತಿಯ ಮತ್ತು ಸುತ್ತಮುತ್ತಲಿನ ಗ್ರಾಮದ ಗ್ರಾಮಸ್ಥರು ಇದ್ದರು

ಮುದುಗೋಟ್ ಗ್ರಾಮದಲ್ಲಿ ಸರ್ವೆ ನಂಬರ್ 89ರಲ್ಲಿ ಗೈರಾಣಿ ಜಮೀನು ಒತ್ತುವರಿ ಆರೋಪ

ನೈಜ್ಯ ದೆಸೆ ನ್ಯೂಸ್

ದೇವದುರ್ಗ: ಮಾ 3 ತಾಲೂಕಿನ ಮುದುಗೋಟ್ ಗ್ರಾಮದಲ್ಲಿ ಗಂಭೀರ ಭೂ ಒತ್ತುವರಿ ಪ್ರಕರಣ ಬೆಳಕಿಗೆ ಬಂದಿದೆ. ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಮುದುಗೂಟ ಗ್ರಾಮದ ಚಪ್ಪಳಕಿ ಸೀಮಾಂತರದಲ್ಲಿರುವ ಸರ್ವೆ ನಂ. 89 ಸರಕಾರಿ ಗೈರಾಣಿ ಭೂಮಿಯಾಗಿದ್ದು, ಈ ಜಮೀನನ್ನು ಗ್ರಾಮದ ದನ–ಕರುಗಳಿಗೆ ಮೀಸಲಿಟ್ಟಿದ್ದರೂ ಅಕ್ರಮವಾಗಿ ಮರಂ ಸಾಗಾಟ ಮತ್ತು ಜಮೀನು ಒತ್ತುವರಿ ನಡೆಯುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮಸ್ಥರ ಪ್ರಕಾರ, ಮಾನ್ಯ ಸಹಾಯಕ ಆಯುಕ್ತರು, ರಾಯಚೂರು ಅವರು ಆದೇಶ ಸಂಖ್ಯೆ ಹಕ್ಕು /3–87–88 ದಿನಾಂಕ 23–03–1989ರಂತೆ ಮಂಜೂರಾದ ಸಾಗುವಳಿ ಚೀಟಿಯನ್ನು ರದ್ದುಪಡಿಸಲು ಸ್ಪಷ್ಟ ಆದೇಶ ನೀಡಿದ್ದರು. ಆದಾಗ್ಯೂ, ಈ ಆದೇಶವನ್ನು ಪಾಣಿ ಪತ್ರಿಕೆ (ಕಾಲಂ 9 ಮತ್ತು 12) ಯಲ್ಲಿ ಗೈರಾಣಿ ಎಂದು ದಾಖಲಿಸುವಂತೆ 02–07–2021ರಂದು ತಹಸೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದರೂ, ಇದುವರೆಗೆ ಯಾವುದೇ ಕ್ರಮ ಕೈಗೊಳ್ಳಿಲ್ಲ ಎಂದು ಆರೋಪಿಸಲಾಗಿದೆ. ಕೂಡಲೇ ಸರ್ವೇ ನಂಬರ್ 89 ರಲ್ಲಿ ಸರ್ಕಾರಿ ಜಮೀನನ್ನು ಅಳತೆ ಮಾಡಿ ಹದ್ದುಬಸ್ತು ಮಾಡಿ ಸರ್ಕಾರಿ ಗೈರಾಣಿ ಜಮೀನು ಉಳಿಸಬೇಕೆಂದು ಒತ್ತಾಯ ಗ್ರಾಮಸ್ಥರ ಆರೋಪ

ಎಂ.ಎಸ್. ಪಾಟೀಲ್ (ಗ್ರಾಮ ಪಂಚಾಯತ್ ಸದಸ್ಯರು) ಮಾತನಾಡಿ, "ಸರ್ಕಾರಿ ಗೈರಾಣಿ ಜಮೀನನ್ನು ಹದ್ದುಬಸ್ತು ಮಾಡಲು ತಾಲೂಕು ಆಡಳಿತ ಸಂಪೂರ್ಣ ವಿಫಲವಾಗಿದೆ. ಜಿಲ್ಲಾಧಿಕಾ–ರಿಗಳು ಮಧ್ಯಪ್ರವೇಶಿಸಿ ಜಮೀನನ್ನು ಉಳಿಸಬೇಕು" ಎಂದು ಒತ್ತಾಯಿಸಿದರು. ಕೃಷ್ಣಪ್ಪ ದೊರೆ ಮಾತನಾಡಿ, "ಸರ್ವೆ ನಂ. 89ರಲ್ಲಿ ಚೆಕ್‌ಬಂದಿ ಇಲ್ಲ, ಫಾರಂ ನಂ. 10 ಇಲ್ಲ, ನಕ್ಷೆ ಇಲ್ಲ, ಸರಿಯಾದ ಅಳತೆ ಮಾಡಿಲ್ಲ. ಒಂದು ಎಕರೆ ಜಮೀನು ಹೊಂದಿರುವವರು ನಾಲ್ಕು ಎಕರೆಗೂ ಹೆಚ್ಚು ಒತ್ತುವರಿ ಮಾಡಿದ್ದಾರೆ. ಇದಕ್ಕೆ ಕಂದಾಯ ನಿರೀಕ್ಷಕ ದೇವರೆಡ್ಡಿ ಮತ್ತು ಗ್ರಾಮ ಲೆಕ್ಕಾಧಿಕಾರಿಗಳ ನಿರ್ಲಕ್ಷ್ಯವೇ ಕಾರಣ" ಎಂದು ಆರೋಪಿಸಿದರು. ಗ್ರಾಮಸ್ಥರು ಈಗಾಗಲೇ

ಲೋಕಾಯುಕ್ತ ಇಲಾಖೆ, ಬೆಂಗಳೂರು ಅವ–ರಿಗೆ ಪತ್ರದ ಮೂಲಕ ದೂರು ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಮಾನ್ಯ ತಹಸೀಲ್ದಾರರು ಕಂದಾಯ ನಿರೀಕ್ಷಕರಾದ ದೇವಿ ರೆಡ್ಡಿ ಹಾಗೂ ಗ್ರಾಮಲೆಕ್ಕಾಧಿಕಾರಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ಕೂಡಲೇ ಅಕ್ರಮವಾಗಿ ಮರಂ ಒಡೆಯುವ ಕಾರ್ಯನಿಲ್ಲಬೇಕು.ಹಗ್ಗಿಲ್ಲದೆ ಜೆಸಿಬಿ ಟಿಪ್ಪರ್ಗಳಿಂದ ಮರಂಸಾಗಟ ನಡೆಯುತ್ತಿದೆ ತಕ್ಷಣದಿಂದ ನಿಲ್ಲಿಸಬೇಕು. ಇಲ್ಲವಾದರೆ ದನ–ಕರುಗಳ ಸಮೇತ ತಹಸೀಲ್ದಾರ್ ಕಚೇರಿ ಮುಂದೆ ಹೋರಾಟ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಹಾಜರಿದ್ದವರು

**ಕೃಷ್ಣಪ್ಪ ದೊರೆ,
ಎಂ.ಎಸ್. ಪಾಟೀಲ್ (ಗ್ರಾಮ ಪಂಚಾಯತ್ ಸದಸ್ಯರು),
ಗೋವಿಂದರಾಜ ದೊರೆ,
ಅಪ್ಪು ಪಾಟೀಲ್,
ಆರ್.ಎಸ್. ಪಟೇಲ್,
ದೇವಪ್ಪಗೌಡ ಮೇಟಿ,
ಹಂಪಣ್ಣ ತಪಾಸಿ,
ಚೆನ್ನಪ್ಪ ಮುದುಗೋಟ್,
ಸಾಬಣ್ಣ ಮೇಟಿ ಗೌಡ,
ತಿಮ್ಮಣ್ಣ ತಳವಾರ್,
ಚೆನ್ನಪ್ಪ ದಳಪತಿ,
ಚಂದ್ರು ಪಾಟೀಲ್,
ಸಿದ್ದಪ್ಪ ತಳವಾರ್,
ಚಂದ್ರಮ ಆಂಜನೇಯ ಮೇಟಿ,
ನಾಗಪ್ಪ ಮೇಟಿ,
ಈರಣ್ಣ ಮೇಟಿ,
ಮಂಜುನಾಥ್ ಮೇಟಿ,
ಕಾಶಿನಾಥ್ ಮೇಟಿ,
ಚನ್ನಬಸವ ಮೇಟಿ,
ಬಸವರಾಜ್ ದೊರೆ,
ರಂಗನಾಥ ದೊರೆ,
ಹನುಮಂತರಾಯಗೌಡ ಆಲದಾಳ ಹಾಗೂ ಮುದುಗೋಟ್ ಗ್ರಾಮದ ಇತರ ಗ್ರಾಮಸ್ಥರು.**

ಜಿಲ್ಲಾಡಳಿತದಿಂದ ಯೋಗಿನಾರೇಯಣ ಯತೀಂದ್ರರ ಜಯಂತ್ಯುತ್ಸವ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಾರ್ಚ 3ರಂದು ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತ್ಯುತ್ಸವ ನಡೆಯಿತು.

ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಪರಶುರಾಮ ಅವರು ಉದ್ಘಾಟಿಸಿ ಮಾತನಾಡಿ, ಮಹನೀಯರ ಜಯಂತಿಗಳು ಆಚರಣೆಗಷ್ಟೆ ಸೀಮಿತವಾಗದೇ ಅವರ ಆದರ್ಶ, ತತ್ವಗಳನ್ನು ನಾವು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು. 17ನೇ ಶತಮಾನದಲ್ಲಿ ಜೀವಿಸಿದ್ದ ಕೈವಾರ ತಾತಯ್ಯ ಅವರು ಪವಾಡ ಪುರುಷರಾಗಿದ್ದರು. ತಾತಯ್ಯ ಅವರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲ ಸಮಾಜಗಳು ಸ್ಮರಿಸಿಕೊಳ್ಳಬೇಕಿದೆ.

ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿ, ತಾರತಮ್ಯ, ಅಸಮಾನತೆ ಹೋಗಲಾಡಿಸಲು ತಾತಯ್ಯರು ಕೈಗೊಂಡ ಸಾಮಾಜಿಕ ಸುಧಾರಣೆ ಕಾರ್ಯ ಇಂದಿಗೂ ಮಾದರಿಯಾಗಿದೆ. ತ್ರಿಕಾಲ ಜ್ಞಾನಿಯಾಗಿದ್ದ ಕೈವಾರ ತಾತಯ್ಯ ಅವರು ಪ್ರಾಪಂಚಿಕ ಆಗು–ಹೋಗುಗಳನ್ನು ಅರಿತು ಮನುಕುಲದ ಒಳಿತಿಗಾಗಿ ಅಪಾರ ಕೊಡುಗೆ ನೀಡಿದ್ದಾರೆ. ಹಾಗಾಗಿ ರಾಜ್ಯ ಸರ್ಕಾರವು ಅವರ ಜಯಂತಿ ಆಚರಣೆ ಮಾಡುತ್ತಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ ದ್ರಾಕ್ಷಿ, ಅನಿಲ್ ಕುಮಾರ್, ವಿನೋದ ಕುಮಾರ್, ಸುರೇಶ, ಶೈಲಜಾ ಸೇರಿದಂತೆ ಇತರರು ಇದ್ದರು.

ಇರಾನ್–ಇಸ್ರೇಲ್ ಯುದ್ಧ ದುಬೈ ನಲ್ಲಿ ಸಿಲುಕಿದ ಸಿಂಧನೂರಿನ ಖ್ಯಾತ ವೈದ್ಯ ಡಾ.ಕೆ.ಶಿವರಾಜ ದಂಪತಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಇರಾನ್– ಇಸ್ರೇಲ್ ನಡುವೆ ಯುದ್ಧ ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ದುಬೈ ಪ್ರವಾಸಕ್ಕೆ ತೆರಳಿದ ಸಿಂಧನೂರಿನ ಸಹನಾ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಕೆ.ಶಿವರಾಜ ಮತ್ತು ಅವರ ಪತ್ನಿ ಜ್ಯೋತಿ ಸೇರಿ ಕರ್ನಾಟಕ ರಾಜ್ಯದ 70 ಜನ ದುಬೈನಲ್ಲಿ ಸಿಲುಕಿಕೊಂಡು ಆತಂಕಕ್ಕೆ ಸಿಲುಕಿದ್ದಾರೆ.

ವಿಜಯರತ್ನ ಇಂಟರ್ ನ್ಯಾಷನಲ್

ಅವಾರ್ಡ್ ಗೆ ಭಾಜನರಾದ ಕಾರಣಕ್ಕೆ ಅದನ್ನು ಸ್ವೀಕರಿಸುವುದಕ್ಕಾಗಿ ಡಾ. ಕೆ. ಶಿವರಾಜ ಪಾಟೀಲ್ ಅವರು ತಮ್ಮ ಪತ್ನಿಯೊಂದಿಗೆ ದುಬೈ ಪ್ರವಾಸಕ್ಕೆಂದು ಫೆ.24 ರಂದು ಬಳ್ಳಾರಿಯಿಂದ ತೆರಳಿದ್ದರು. ಫೆ.28ಕ್ಕೆ ವಾಪಸ್ ಆಗಬೇಕಿತ್ತು. ಆದರೆ ಇದರ ನಡುವೆ ಯುದ್ಧದ ಕಾರ್ಮೋಡ ಸೃಷ್ಟಿಯಾದ ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ಭಾರತಕ್ಕೆ ಬರಲು ಆಗದೆ ದುಬೈನಲ್ಲಿಯೇ ಸಿಲುಕಿಕೊಂಡಿದ್ದಾರೆ.

ಡಾ.ಕೆ. ಶಿವರಾಜ ಪಾಟೀಲ್ ಸೇರಿ ರಾಜ್ಯದ 70 ಜನರು ಸದ್ಯ ದುಬೈನ ಖಾಸಗಿ ಹೋಟೆಲ್ ಒಂದರಲ್ಲಿ ಸುರಕ್ಷಿತವಾಗಿದ್ದು, ಶೀಘ್ರ ಭಾರತಕ್ಕೆ ಕರೆ ತರುವಂತೆ ಮನವಿ ಮಾಡಿದ್ದಾರೆ. ಸಿಂಧನೂರಿನ ಸಹನಾ ಆಸ್ಪತ್ರೆಯ ಮಕ್ಕಳ ವೈದ್ಯ ಡಾ. ಕೆ ಶಿವರಾಜ್ ಅವರು ಅದೇ ಹೋಟೆಲ್ ನಲ್ಲಿ ಇರುವುದರಿಂದ ಸಿಂಧನೂ–ರಿನ ಅವರ ಕುಟುಂಬದವರು ಮತ್ತು ಅಭಿಮಾನಿಗಳು ಆತಂಕ ಪಡುವಂತಾಗಿದೆ.

ಸಾರ್ವಜನಿಕ ಗ್ರಂಥಾಲಯ: 2022ನೇ ಸಾಲಿನ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಪಟ್ಟಿ ಪ್ರಕಟ; ಆಕ್ಷೇಪಣೆ ಸಲ್ಲಿಸಲು ಅವಕಾಶ

ನೈಜ್ಯ ದೆಸೆ ನ್ಯೂಸ್

ರಾಯಚೂರು: 2022ನೇ ವರ್ಷದಲ್ಲಿ ಪ್ರಥಮ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಪಟ್ಟಿಯನ್ನು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥ–ಾಲಯಗಳ ಕಚೇರಿಗಳಲ್ಲಿ ಹಾಗೂ ಇಲಾಖೆಯ ಅಧಿಕೃತ ವೆಬಸೈಟ್ www.dpl.karnataka.gov.in ನಲ್ಲಿ 2026 ನೇ ಮಾರ್ಚ್ 02 ರಂದು ಪ್ರಕಟಿಸಲಾಗಿದೆ.



ಆಕ್ಷೇಪಣೆ ಸಲ್ಲಿಸಲು ಅವಕಾಶ: ಆಯ್ಕೆಯಾದ ಪುಸ್ತಕಗಳ ಪಟ್ಟಿಯಲ್ಲಿರುವ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ತಮ್ಮ ಪುಸ್ತಕಗಳಿಗೆ ಸಂಬಂಧಿಸಿದ ಪುಸ್ತಕದ ಶೀರ್ಷಿಕೆ, ಲೇಖಕರ / ಪ್ರಕಾಶಕರ ಹೆಸರು, ಮುಖ ಬೆಲೆ (ನಿಗದಿತ ಬೆಲೆಯಲ್ಲಿ ವ್ಯತ್ಯಾಸವಿದ್ದಲ್ಲಿ), ಪುಸ್ತಕದ ಅಳತೆ ಮತ್ತು ಪುಟಗಳ ಸಂಖ್ಯೆ ಅಥವಾ ಇತರ ಯಾವುದೇ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ತಮ್ಮ ಆಕ್ಷೇಪಣೆ ಅಥವಾ ತಿದ್ದುಪಡಿಗಳನ್ನು ಅಧಿಕೃತ ಮಾಹಿತಿ / ದಾಖಲೆಗಳೊಂದಿಗೆ 2026 ನೇ ಮಾರ್ಚ್ 16ರ ಸಂಜೆ 5.30ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು 560001 ಇಲ್ಲಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ನಿಗದಿತ ಅವಧಿಯ ನಂತರ ಬರುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಏಕಪಕ್ಷೀಯವಾಗಿ ನಿರ್ಣಯವನ್ನು ಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಹೆಚ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಳೆ ಬಜಾರ್ ರಸ್ತೆ ಅತಿಕ್ರಮಣ ಕಟ್ಟಡಗಳನ್ನು ತೆರವು ಗೊಳಿಸಲು ಕೆಆರ್ ಎಸ್ ನಿಂದ ಡಿಸಿಗೆ ಮನವಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ರಾಜಕಾರಣಿಗಳು ಮತ್ತು ಅಧಿಕಾರಿಗಳ ತಾರತಮ್ಯ ಧೋರಣೆಯನ್ನು ನಮ್ಮ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಮತ್ತು ಕೂಡಲೇ ಹಳೆ ಬಜಾರ್ ನಲ್ಲಿ ತೆರವು ಕಾರ್ಯ ಚರಣೆಯನ್ನು ನಡೆಸುವ ಮೂಲಕ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರೈತ ಸಂಘದಿಂದ ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಅವರ ಮೂಲಕ ಜಿಲ್ಲಾ ಡಿಸಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಒಂದು ವೇಳೆ ವಿಳಂಬ ಧೋರಣೆ ಅನುಸರಿಸಿದಲ್ಲಿ ನಮ್ಮ ಸಂಘಟನೆಯಿಂದ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚತಚರಿಸುತ್ತಾ, ನಗರದ ಚನ್ನಮ್ಮ ಸರ್ಕಲ್ (ಹಳೆ ಬಜಾರ) ನಿಂದ ಟಿಪ್ಪು ಸುಲ್ತಾನ್ ಸರ್ಕಲ್ ವರೆಗೂ ಎಡ ಮತ್ತು ಬಲ ಭಾಗದ ರಸ್ತೆ ಅತಿ–ಕ್ರಮಿಸಿದ ಬಿಲ್ಡಿಂಗ್ ಗಳನ್ನು ತೆರವುಗೊಳಿಸಿ, ಜನರ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಒತ್ತಾಯ ನಗರವು ದಿನದಿಂದ ದಿನಕ್ಕೆ ಅತಿ ವೇಗವಾಗಿ ಬೆಳೆಯುತ್ತಿದೆ, ಇದರಿಂದಾಗಿ ನಗರದ ಪ್ರಮುಖ

ಏರಿಯಾಗಳಲ್ಲಿ ಜನಸಂದಣಿ ಜಾಸ್ತಿಯಾಗುತ್ತಿದ್ದು, ಹೆಚ್ಚು ಜನರಿರುವ ಪ್ರದೇಶಗಳಲ್ಲಿ ಹಳೆಬಜಾರ್ ಪ್ರದೇಶವೂ ಕೂಡ ಒಂದಾಗಿದೆ. ರಸ್ತೆಯಲ್ಲಿ ಜನಸಾಮಾನ್ಯರು ಸಂಚರಿಸುವುದಕ್ಕೆ ದಿನವೂ ಹರಸಹಾಸ ಪಡುತ್ತಿದ್ದಾರೆ. ಹೀಗಾಗಿ ರಸ್ತೆ ಅಗಲೀಕರಣ ಅತ್ಯಂತ ಅವಶ್ಯಕತೆ ಇರುತ್ತದೆ ಎಂದು ಮನವಿ ಪತ್ರದಲ್ಲಿ ಸಂಘಟಕರು ಪ್ರಸ್ತಾಪಿಸಿದ್ದಾರೆ.

40 ಫೀಟ್ ಇದ್ದ ರಸ್ತೆ 20 ಫೀಟ್‌ಗೆ ಬಂದಿದೆ ! ಕಳೆದ 2004ರಲ್ಲಿ ಸರ್ಕಾರ ಚನ್ನಮ್ಮ ಸರ್ಕಲ್ ನಿಂದ ಟಿಪ್ಪು ಸುಲ್ತಾನ್ ಸರ್ಕಲ್ ವರೆಗೂ ಇರುವ ಸಾರ್ವಜನಿಕ ರಸ್ತೆಯನ್ನು ಅತಿಕ್ರಮಿಸಿದ ಕಟ್ಟಡಗಳನ್ನು ತೆರವುಗೊಳಿಸಲು ಆದೇಶ ಇದ್ದರು ಸಹ ಮತ್ತು ಎರಡು ಬದಿಯಲ್ಲಿ ಮಾರ್ಕ್‌ಔಟ್ ಮಾಡಿದ್ದೂ ಹಾಗೆಯೇ ಉಳಿದಿರುತ್ತದೆ. ಆದ–ರೆ 22 ವರ್ಷಗಳುವರ್ಷಗಳು ಕಳೆದರೂ ಇಲ್ಲಿಯವರೆಗೆ ರಸ್ತೆ ಅಗಲೀಕರಣ ಮಾಡುವ ಕೆಲಸ ಮಾತ್ರ ನಡೆದಿರುವುದಿಲ್ಲ. ಎರಡೂ ಬದಿಗಳಲ್ಲಿ 40 ಫೀಟ್ ಇರಬೇಕಾದ ರಸ್ತೆಯನ್ನು ಅತಿಕ್ರಮಿಸಿದ್ದ 20 ಫೀಟ್ ಗೆ ತಂದಿಳಿಸಿದ್ದಾರೆ.

ಸಾರ್ವಜನಿಕ ಸಂಚಾರಕ್ಕೆ ಸಮಸ್ಯೆಯಾಗಿರುತ್ತದೆ. ಹಾಗಾಗಿ ಕೂಡಲೇ ಎರಡೂ ಬದಿಯ ಕಟ್ಟಡಗಳನ್ನು ತೆರವುಗೊಳಿಸಿ ರಸ್ತೆಯನ್ನು ಅಗಲೀಕರಣ ಮಾಡಬೇಕು ಎಂದು ಮನವಿ ಮಾಡಿದ್ದಾರೆ. ಬೀದಿ ವ್ಯಾಪಾರಸ್ಥರಿಗೆ ಒಂದು ನ್ಯಾಯ, ಬಿಲ್ಡಿಂಗ್ ಧಣಿಗಳಿಗೆ ಒಂದು ನ್ಯಾಯವೇ ? ಕಳೆದ ವರ್ಷ 2024 ಡಿಸೆಂಬರ್ 25ರಂದು ಹೈಕೋರ್ಟ್ ಆದೇಶವಿದೆಯೆಂದು ಬೀದಿ ಬದಿಯ ವ್ಯಾಪಾರಸ್ಥರನ್ನುವ್ಯಾಪಾರಸ್ಥರನು ಬೀದಿಗೆ ತಳ್ಳಿದ ನಗರಸಭೆ ಪೌರಾಯುಕ್ತರು, ತಹಶೀಲ್ದಾರ್, ಪಿಡಬ್ಲ್ಯೂಡಿ ಇಲಾಖೆ ಅಧಿಕಾ–ರಿಗಳು, ತೋಟಗಾರಿಕೆ ಇಲಾಖೆಯವರು, ಸೇ–ರಿಕೊಂಡು ಸಣ್ಣಪುಟ್ಟ ವ್ಯಾಪಾರಸ್ಥರನ್ನುವ್ಯಾಪಾರಸ್ಥರನ್ನು ಒಕ್ಕಲೆಬ್ಬಿಸಿ, ರಸ್ತೆ ಅತಿಕ್ರಮಣ ಬಿಲ್ಡಿಂಗ್ ಧಣಿಗಳಿಗೆ ದಯೆ ತೋರಿಸಿ ಬಚಾವ್ ಮಾಡಿದ್ದಾರೆ.

ಬೀದಿ ವ್ಯಾಪಾರಸ್ಥರನ್ನು ಹಟಾವ್ ಮಾಡಿ, ಸರ್ಕಾರಕ್ಕೆ ಸೈ ಎನಿಸಿಕೊಂಡಿದ್ದಾರೆ. ಹೈಕೋರ್ಟ್ ಆದೇಶಆದೇಶ ಇರುವುದು ರಸ್ತೆ ಮಧ್ಯದ ಭಾಗದಿಂದ 21 ಮೀಟರ್ ಅತಿಕ್ರಮಿಸಿದ ಬಿಲ್ಡಿಂಗ್ ಗಳನ್ನು ತೆರವುಗೊಳಿಸಬೇಕೆಂದು ಇದೆ, ಅಲ್ಲಿ ಪ್ರಯೋಗ ಮಾಡಲಾಗದೇ ದುಡಿದುಕೊಂಡು ತಿನ್ನುವವರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿರುವುದು ಯಾವ ನ್ಯಾಯ ಇದಕ್ಕೆ ನಾವು ಸಿಂಧನೂರು ಅಭಿವೃದ್ಧಿ ಎನ್ನಬಹುದೇ? ಎಂದು ಮನವಿ ಪತ್ರದಲ್ಲಿ ಪ್ರಶ್ನಿಸಿದ್ದಾರೆ. ಈ ವೇಳೆ: ಕೆಆರ್ ಎಸ್ ಜಿಲ್ಲಾ ಕಾರ್ಯದರ್ಶಿ ಚಿಟ್ಟಿಬಾಬು, ಟಿಯುಸಿಐ ಜಿಲ್ಲಾಧ್ಯಕ್ಷ ಬಿ.ಎನ್. ಯರದಿಹಾಳ,ಕೆ.ಆರ್.ಎಸ್.ತಾಲೂಕು ಅಧ್ಯಕ್ಷರಮೇಶ ಪಾಟೀಲ್ ಬೇರ್ಗಿ, ಸೇರಿದಂತೆ ಇನ್ನಿತರರು ಇದ್ದರು.

ಶಿಕ್ಷಣ ಮಾರ್ಗದರ್ಶಿ ವಿಶೇಷ

ಸಿವಿಲ್ ಇಂಜಿನಿಯರಿಂಗ್

ಸಿವಿಲ್ ಇಂಜಿನಿಯರಿಂಗ್ (Civil Engineering) ಮೂಲಸೌಕರ್ಯಗಳಾದ ಕಟ್ಟಡಗಳು, ಸೇತುವೆಗಳು, ರಸ್ತೆಗಳು ಮತ್ತು ಅಣೆಕಟ್ಟುಗಳ ಯೋಜನೆ, ವಿನ್ಯಾಸ ಮತ್ತು ನಿರ್ಮಾಣವನ್ನು ಒಳಗೊಂಡಿರುವ ಪ್ರಮುಖ ಎಂಜಿನಿಯ-ರಿಂಗ್ ವಿಭಾಗವಾಗಿದೆ. ಈ ಕೋರ್ಸ್ ಭೌತಿಕ ವಿಜ್ಞಾನ, ಗಣಿತ ಮತ್ತು ವಸ್ತು ವಿಜ್ಞಾನದ ಅನ್ವಯಗಳನ್ನು ಕಲಿಸುತ್ತದೆ. BE/B.Tech (4 ವರ್ಷ) ಅಥವಾ ಡಿಪ್ಲೊಮಾ (3 ವರ್ಷ) ಆಯ್ಕೆಗಳಿದ್ದು, ನಿರ್ಮಾಣ ಮತ್ತು ಯೋಜನಾ ನಿರ್ವಹಣೆಯಲ್ಲಿ ವ್ಯಾಪಕ ಉದ್ಯೋಗಾವಕಾಶಗಳನ್ನು ಹೊಂದಿದೆ. ಸಿವಿಲ್ ಎಂಜಿನಿಯರಿಂಗ್ ಕೋರ್ಸ್ ಪ್ರಮುಖ ವಿವರಗಳು: ಕೋರ್ಸ್ ವಿಧಗಳು: ಬಿ.ಇ (Bachelor of Engineer-ing) / ಬಿ.ಟೆಕ್ (Bachelor of Technology) – 4 ವರ್ಷಗಳು, ಡಿಪ್ಲೊಮಾ (Polytechnic) – 3 ವರ್ಷಗಳು. ಅರ್ಹತೆ: 10+2 ಅಥವಾ ಪಿಯುಸಿ (ಕಅಒ – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ) ಕನಿಷ್ಠ 50% ಅಂಕಗಳೊಂದಿಗೆ. ಪ್ರವೇಶ ಪರೀಕ್ಷೆಗಳು: ಎಇಇ ಒಟಿಟಿ, ಏಅಇಖ (ಕರ್ನಾಟಕ). ಮುಖ್ಯ ವಿಷಯಗಳು: ಸ್ಟ್ರಕ್ಚರಲ್ ಅನಾಲಿಸಿಸ್ (Structural Analysis), ಕಾಂಕ್ರೀಟ್ ತಂತ್ರಜ್ಞಾನ (Concrete Technol-ogy), ಜಿಯೋಟೆಕ್ನಿಕಲ್ ಇಂಜಿನಿಯರಿಂಗ್ (Soil Mechan-ics), ಸಮೀಕ್ಷೆ (Surveying), ಪರಿಸರ ಇಂಜಿನಿಯರಿಂಗ್, ಟ್ರಾನ್ಸ್‌ಪೋರ್ಟೇಶನ್ ಇಂಜಿನಿಯರಿಂಗ್. ಕಲಿಕೆಯ ಕೌಶಲ್ಯಗಳು: CAD (Computer-Aided Design), 3D ಮಾಡೆಲಿಂಗ್, ನಿರ್ಮಾಣ ಯೋಜನೆ ಮತ್ತು ನಿರ್ವಹಣೆ, ವಸ್ತು ಪರೀಕ್ಷೆ. ಉದ್ಯೋಗಾವಕಾಶಗಳು: ಕಫಅ, ನೀರಾವರಿ ಇಲಾಖೆ, ಮೆಟ್ರೋ ರೈಲು ಯೋಜನೆಗಳು, ಕನ್ಸ್ಟ್ರಕ್ಷನ್ ಕಂಪನಿಗಳು, ಸೈಟ್ ಇಂಜಿನಿಯರ್, ಸ್ಟ್ರಕ್ಚರಲ್ ಡಿಸೈನರ್, ಯೋಜನಾ ವ್ಯವಸ್ಥಾಪಕ. ಅವಕಾಶಗಳು: ಸರ್ಕಾರಿ ವಲಯ: PWD (Public Works Department), ಓಊಂಖ, ರೈಲ್ವೆ, ಪುರಸಭೆಗಳು. ಖಾಸಗಿ ವಲಯ: ರಿಯಲ್ ಎಸ್ಟೇಟ್, ನಿರ್ಮಾಣ ಸಂಸ್ಥೆಗಳು, ಕನ್ಸಲ್ಟೆನ್ಸಿ ಫರ್ಮ್‌ಗಳು. ಮೂಲಸೌಕರ್ಯಗಳ ಯೋಜನೆ ಮತ್ತು ನಿರ್ಮಾಣದ ಮೂಲ ಪರಿಕಲ್ಪನೆಗಳನ್ನು ಕಲಿಸುತ್ತವೆ. ಇವು ಸಣ್ಣ ಪ್ರಮಾಣದ ಕಟ್ಟಡಗಳು ಅಥವಾ ದೊಡ್ಡ ಪ್ರಮಾಣದ ಮೂಲಸೌಕರ್ಯಗಳಾಗಿರಬಹುದು. ವಿದ್ಯಾರ್ಥಿಗಳು ಅವುಗಳನ್ನು ಯೋಜಿಸುವುದು, ವಿನ್ಯಾಸಗೊಳಿಸುವುದು, ನಿರ್ಮಿಸುವುದು ಮತ್ತು ನಿರ್ವಹಿಸುವ ಪರಿಕಲ್ಪನೆಗಳ ಬಗ್ಗೆ ಕಲಿಯುತ್ತಾರೆ. ಅವಲೋಕನಕೋರ್ಸ್‌ಗಳುಸಿವಿಲ್ ಎಂಜಿನಿಯ-ರಿಂಗ್ ವಿಷಯಗಳುಸಿವಿಲ್ ಎಂಜಿನಿಯರಿಂಗ್ ಸಂಬಳಸಿವಿಲ್ ಎಂಜಿನಿಯರಿಂಗ್ ಪ್ರವೇಶಜೆಇಇ ಮುಖ್ಯ vsಜೆಇಇ ಅಡ್ವಾನ್ಸ್ಡ್-ಎಂಜಿನಿಯರಿಂಗ್ ಸ್ಟ್ರೀಮ್ ಜನಪ್ರಿಯತೆಯ ಪ್ರವೃತ್ತಿಜನಪ್ರಿಯ ಕಾಲೇಜುಗಳುಯುಜಿ ಕೋರ್ಸ್‌ಗಳುಪಿಜಿ ಕೋರ್ಸ್‌ಗಳುಉನ್ನತ ಪರೀಕ್ಷೆಗಳುವೈಶಿಷ್ಟ್ಯಪೂರ್ಣ ಕಾಲೇಜುಗಳುಪ್ರಶ್ನೋತ್ತರಗಳು ಫೆಬ್ರವರಿ 19, 2026 06:09 ಖಙಖ ರಂದು ನವೀಕರಿಸಲಾಗಿದೆ ಆಕಾಂಶಾ ಬಿಶ್ತ್ ಆಕಾಂಶಾ ಬಿಶ್ತ್ ಹಿರಿಯ ಕಾರ್ಯನಿರ್ವಾಹಕ

12ನೇ ತರಗತಿಯ ನಂತರ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳು ಮೂಲಸೌಕರ್ಯಗಳ ಯೋಜನೆ ಮತ್ತು ನಿರ್ಮಾಣದ ಮೂಲ ಪರಿಕಲ್ಪನೆಗಳನ್ನು ಕಲಿಸುತ್ತವೆ. ಇವು ಸಣ್ಣ ಪ್ರಮಾಣದ ಕಟ್ಟಡಗಳು ಅಥವಾ ದೊಡ್ಡ ಪ್ರಮಾಣದ ಮೂಲಸೌಕರ್ಯಗಳಾಗಿರಬಹುದು. ವಿದ್ಯಾರ್ಥಿಗಳು ಅವುಗಳನ್ನು ಯೋಜಿಸುವುದು, ವಿನ್ಯಾಸಗೊಳಿಸುವುದು, ನಿರ್ಮಿಸುವುದು ಮತ್ತು ನಿರ್ವಹಿಸುವ ಪರಿಕಲ್ಪನೆಗಳ ಬಗ್ಗೆ ಕಲಿಯುತ್ತಾರೆ. ಭಾರತದಲ್ಲಿ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳ ಕುರಿತು ಹೆಚ್ಚಿನ ವಿವರಗಳಿಗಾಗಿ ಲೇಖನವನ್ನು ಓದುವುದನ್ನು ಮುಂದುವರಿಸಿ. ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಇತ್ತೀಚಿನ ನವೀಕರಣಗಳು: ಜೆಇಇ ಮುಖ್ಯ 2026 ಸೆಷನ್ 1 ಫಲಿತಾಂಶ ಹೊರಬಿದ್ದಿದೆ ಬಿಇ/ಬಿಟೆಕ್ ಕೋರ್ಸ್‌ಗೆ COMEDK UGET 2026 ಅರ್ಜಿ ವಿಂಡೋ ಮಾರ್ಚ್ 16, 2026 ರವರೆಗೆ ತೆರೆದಿರುತ್ತದೆ . COMEDK UGET ಪರೀಕ್ಷೆ 2026 ಮೇ 9, 2026 ರಂದು ನಡೆಯಲಿದೆ. ಬಿಇ/ಬಿಟೆಕ್ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಟಿಎಸ್ ಇಎಎಮ್‌ಸಿಇಟಿ 2026 ನೋಂದಣಿ ಪ್ರಾರಂಭವಾಗಿದೆ. ಬಿಇ/ಬಿಟೆಕ್ ಕೋರ್ಸ್ ಅನ್ನು ಮೇ 9 ರಿಂದ 11, 2026 ರವರೆಗೆ ನಡೆಸಲಾಗುವುದು. AP EAMCET ನೋಂದಣಿ 2026 ಮಾರ್ಚ್ 7, 2026 ರವರೆಗೆ ನಡೆಯಲಿದೆ. ಬಿಟೆಕ್ ಪರೀಕ್ಷೆಯನ್ನು ಮೇ 12, 13, 14,15 ಮತ್ತು 18, 2026 ರಂದು ನಡೆಸಲಾಗುವುದು. ಸಿವಿಲ್ ಎಂಜಿನಿಯರಿಂಗ್ ಕೋರ್ಸ್ ವಿವರಗಳು: ಮುಖ್ಯಾಂಶಗಳು ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರಮುಖ ಅಂಶಗಳನ್ನು ಹೈಲೈಟ್ ಮಾಡುವ ಕೆಳಗಿನ ಕೋಷ್ಟಕವನ್ನು ನೀವು ನೋಡಬಹುದು. ವಿವರಗಳು ಸಿವಿಲ್ ಎಂಜಿನಿಯರಿಂಗ್ ಕೋರ್ಸ್ ವಿವರಗಳು ಸಿವಿಲ್ ಎಂಜಿನಿಯರಿಂಗ್ ಕೋರ್ಸ್ ಮಟ್ಟಗಳು ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ಪ್ರಮಾಣಪತ್ರ, ಡಾಕ್ಟರೇಟ್ ಪದವಿ ಸಿವಿಲ್ ಎಂಜಿನಿಯರಿಂಗ್‌ನಲ್ಲಿನ ವಿಶೇಷ ಕ್ಷೇತ್ರಗಳು ರಚನಾತ್ಮಕ ಎಂಜಿನಿಯರಿಂಗ್ , ಭೂತಾಂತ್ರಿಕ ಎಂಜಿನಿಯರಿಂಗ್, ಪರಿಸರ ಎಂಜಿನಿಯರಿಂಗ್, ಸಾರಿಗೆ ಎಂಜಿನಿಯರಿಂಗ್ ಮತ್ತು ಜಲ ಸಂಪನ್ಮೂಲ ಎಂಜಿನಿಯರಿಂಗ್ ಸಿವಿಲ್ ಎಂಜಿನಿಯರಿಂಗ್ ಕೋರ್ಸ್ ಅರ್ಹತಾ ಮಾನದಂಡಗಳು ಯುಜಿ: 12 ನೇ ತರಗತಿ + ಪ್ರವೇಶ ಪರೀಕ್ಷೆ ಸ್ನಾತಕೋತ್ತರ ಪದವಿ: ಬಿಟೆಕ್ + ಪ್ರವೇಶ ಪರೀಕ್ಷೆ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ: 10 ನೇ ತರಗತಿ ಪ್ರಮಾಣಪತ್ರ : 10ನೇ ತರಗತಿ/12ನೇ ತರಗತಿ ಡಾಕ್ಟರೇಟ್ ಪದವಿ: ಎಂಟೆಕ್ + ಪ್ರವೇಶ ಪರೀಕ್ಷೆ

ಹುದ್ದೆಗಳ ಭರ್ತಿಗೆ ಸಾಮಾಜಿಕ ನ್ಯಾಯ ಘೋಷಣೆಗೆ ಸೀಮಿತವಾಗದೆ ಸಂವಿಧಾನ ಬದ್ದ ಹಕ್ಕಾಗಲಿ: ವೀರೇಶ ಉಪ್ಪಲದೊಡ್ಡಿ.

ನೈಜ್ಯ ದೆಸೆ ನ್ಯೂಸ್

ರಾಜ್ಯದಲ್ಲಿರುವ 56,342 ಖಾಲಿ ಹುದ್ದೆಗಳ ಭರ್ತಿಯನ್ನು ಒಳ ಮೀಸಲಾತಿಯ ಶೇ.15ರ ಹಂಚಿಕೆಯನ್ನು ಸ್ಪಷ್ಟವಾಗಿ ಅನ್ವಯಿಸಿ ಕೈಗೊಳ್ಳಬೇಕು, ಉಪ ಗುಂಪುಗಳವಾರು ಹಂಚಿಕೆ ಹಾಗೂ ಪರಿಷ್ಕೃತ ರೋಸ್ಟರ್ ಜಾರಿಗೊಳಿಸಿ, ಕಾನೂನಿನ ಕ್ರಮದ ಸಮರ್ಥನೆಗಳೊಂದಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒಳ ಮೀಸಲಾತಿ ಐಕ್ಯತಾ ಹೋರಾಟ ಸಮಿತಿ ವತಿಯಿಂದ ನಗರದ ಪ್ರವಾಸಿ ಮಂದಿರದಿಂದ ತಹಶೀಲ್ದಾರ್ ಕಚೇರಿಯವರೆಗೆ ಪ್ರತಿಭಟಿಸಿ ದಂಡಾಧಿಕಾರಿ ಅರುಣ್ ಕುಮಾರ್ ದೇಸಾಯಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕಾಯ್ದೆ ರೂಪಿಸಿ ರಾಜ್ಯಪಾಲ-ರಿಂದ ಅಂಕಿತ ಪಡೆದಿರುವುದು ಮಾದಿಗ ಸಮುದಾಯದ 35 ವರ್ಷಗಳ ಹೋರಾಟಕ್ಕೆ ದೊರೆತ ಐತಿಹಾಸಿಕ ನ್ಯಾಯವಾಗಿದೆ. ಆದರೆ ಫೆ.26ರ ಸಚಿವ ಸಂಪುಟದ ನಿರ್ಣಯದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿರುವ ಸರ್ಕಾರದ ಆದೇಶದಂತೆ ಶೇ.15ರ ಪರಿಶಿಷ್ಟ ಜಾತಿ ಮತ್ತು ಶೇ.3 ಪರಿಶಿಷ್ಟ ಪಂಗಡ ಮೀಸಲಾತಿ ಹಾಗೂ ರೋಸ್ಟರ್ ಮಾರ್ಗಸೂಚಿಗಳಂತೆ ನೇಮಕಾತಿಯ ಪ್ರಕ್ರಿಯೆಯನ್ನು ಕೈಗೊಳ್ಳಲು ಸೂಚಿಸಲಾಗಿದೆ. ಆದರೆ 2025ರ ಸೆಪ್ಟೆಂಬರ್ 3ರ ಆದ-ೇಶಗಳನ್ನು ಅಳವಡಿಸದೆ ನೇಮಕಾತಿ ಮಾಡಲು ಸೂಚಿಸಿರುವುದು ಮಾದಿಗ ಸಮುದಾಯದ ಧೀರ್ಘ 35 ವರ್ಷಗಳ ಹೋರಾಟಕ್ಕೆ ಮಾಡಿದ ಗಂಭೀರ ಅನ್ಯಾಯ ಹಾಗೂ ನಂಬಿಕೆಯ ದ್ರೋಹವಾಗಿದೆ.

ನಾಗಮೋಹನ್ ದಾಸ್ ವರದಿಯ ಆಧಾರದ ಮೇಲೆ ಪರಿಶಿಷ್ಟ ಜಾತಿಗಳನ್ನು ಗ್ರೂಪ್ ಎ,ಬಿ,ಮತ್ತು ಸಿ, ವರ್ಗೀಕರಣದಂತೆ ಒಳ ಮೀಸಲಾತಿ ಉಪವರ್ಗೀಕರಣ ಜಾರಿಗೊಳಿಸಬೇಕು. ಅಲೆಮಾರಿ ಸಮುದಾಯಕ್ಕೆ ನೀಡಿದ ಶೇ.1ರ ಒಳ ಮೀಸಲಾತಿಯನ್ನು ಅವರಿಗೆ ಪ್ರತ್ಯೇಕವಾಗಿ ನೀಡಬೇಕು ಇಲ್ಲವೇ 'ಎ' ಕೆಟಗರಿಗೆ ಸಂಬಂಧಿಸಿದ ಮಾದಿಗ ಸಂಬಂಧಿತ ಜಾತಿಗಳಿಗೆ ಸೇರಿಸಬೇಕು ಎಂಬ ಹಕ್ಕೋತ್ತಾಯಕ್ಕೆ ಸರ್ಕಾರ ಸ್ಪಂದಿಸದಿದ್ದಲ್ಲಿ ಮಾದಿಗ ಸಮುದಾಯವು ರಾಜ್ಯದಾದ್ಯಂತ ತನ್ನ ಹಕ್ಕುಗಳ ರಕ್ಷಣೆಗೆ ರಸ್ತೆಗಿಳಿದು ತೀವ್ ಹೋರಾಟ ನಡೆಸಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ಸ್ಪಷ್ಟ ಪಡಿಸಿದರು. ಈ ಸಂದರ್ಭದಲ್ಲಿ: ಹಸೇನಪ್ಪ ಸೂಲಂಗಿ, ವೀರೇಶ ಉಪ್ಪಲದೊಡ್ಡಿ, ಮೌನೇಶ ಜಾಲವಾಡಗಿ, ದುರುಗೇಶ ಕಲ್ಮಂಗಿ, ಪ್ರವೀಣ್ ದುಮತಿ, ಶಿವರಾಜ ಉಪ್ಪಲದೊಡ್ಡಿ ಮುದಿಯಪ್ಪ ಸಾಸಲಮರಿ, ದುರುಗೇಶ ಬಾಲಿ, ಹಾಗೂ ಮಂಜುನಾಥ ಗೊರೇಬಾಳ, ಹನುಮಂತ ಹಂಪನಾಳ, ಸೇರಿದಂತೆ ಅನೇಕರಿದ್ದರು.

ಮಸ್ಕಿ ತಾಲೂಕಿನ ಆನಂದಗಲ್ ಗ್ರಾಮದ ಸ್ಮಶಾನ ಜಾಗದಲ್ಲಿ ಶವ ಸಂಸ್ಕಾರಕ್ಕೆ ಅನುವು ಮಾಡಿಕೊಡಲು ಗ್ರಾಮಸ್ಥರ ಒತ್ತಾಯ

ನೈಜ್ಯ ದೆಸೆ ನ್ಯೂಸ್



ಮಸ್ಕಿ: ತಾಲೂಕಿನ ಆನಂದಗಲ್ ಗ್ರಾಮಸ್ಥರಿಗೆ ಶವ ಸಂಸ್ಕಾರಕ್ಕೆಂದು ತಾಲೂಕಾಡಳಿತದಿಂದ ಇತ್ತೀಚೆಗೆ ಜಾಗವನ್ನು ಗುರುತಿಸಿದ್ದರು. ಆದ-ರೆ ಜಮೀನಿನ ಮಾಲೀಕರು ಶವ ಸಂಸ್ಕಾರ ಮಾಡದಂತೆ ತಡೆಯಾಜ್ಞೆ ತಂದಿದ್ದು, ಅದೇ ಜಾಗದಲ್ಲಿ ಯಥಾಸ್ಥಿತಿಯಲ್ಲೇ ಶವ ಸಂಸ್ಕಾರಕ್ಕೆ ಅನುವು ಮಾಡಿಕೊಡಬೇಕೆಂದು ಗ್ರಾಮಸ್ಥರು ತಹಸೀಲ್ದಾರ್ ಮಂಜುನಾಥ ಭೋಗಾವತಿ ಅವರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸುವ ಮೂಲಕ ಒತ್ತಾಯಿಸಿದ್ದಾರೆ.

ಆನಂದಗಲ್ ಗ್ರಾಮದ ಸರ್ವೆ ನಂ.7ರಲ್ಲಿ 1.5 (ಒಂದೂವರೆ) ಗುಂಟೆ ಸ್ಮಶಾನ ಜಾಗಕ್ಕೆ ತಹಶೀಲ್ದಾರ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾ-ರಿಗಳು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿಯೇ ಸ್ಮಶಾನ ಸ್ಥಳವನ್ನು ಗುರುತಿಸಿ ತಂತಿ ಬೇಲಿಯನ್ನು ಅಳವಡಿಸಿದ್ದರು. ಸದರಿ ಜಮೀನಿನ ಪಟ್ಟಾದಾರರಾದವರು ಏಕಾ-ಏಕಿಂ-ಮಾಗಿ ಸಹಾಯಕ ಆಯುಕ್ತರವರಿಂದ ತಡೆಯಾಜ್ಞೆಯನ್ನು ತಂದು ಶವ ಸಂಸ್ಕಾರ ಮಾಡದಂತೆ ಗ್ರಾಮಸ್ಥರಿಗೆ ತೊಂದರೆ ನೀಡುತ್ತಿದ್ದಾರೆಂದು ಆರೋಪಿಸಿದರು. ಸ್ಮಶಾನ ಜಾಗವನ್ನು ಯಾವುದೇ ಕಾರಣ-ಕ್ಕೂ ತೆರವುಗೊಳಿಸದಂತೆ ಕ್ರಮ ಕೈಗೊಂಡು ಗ್ರಾಮಸ್ಥರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜ (ರಿ) ದ ತಾಲೂಕು ಅಧ್ಯಕ್ಷರಾಗಿ ಮೌನೇಶ್ ಆಚಾರ್ ಹಾಲ್ವಿ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಶ್ರೀ ಕಾಳಿಕಾ ದೇವಸ್ಥಾನದಲ್ಲಿ ನಡೆದ ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜ (ರಿ) ಸಭೆಯಲ್ಲಿ ಮಾನ್ವಿ ತಾಲೂಕು ಅಧ್ಯಕ್ಷರನ್ನಾಗಿ ಮೌನೇಶ್ ಆಚಾರ್ ಹಾಲ್ವಿ ಅವರನ್ನು ಏಕಮತದಿಂದ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಸಮಾಜದ ಸಂಘಟನೆ ಬಲವರ್ಧನೆ, ಯುವಕರ ಸಕ್ರಿಯ ಭಾಗವಹಿಸುವಿಕೆ ಹಾಗೂ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆಗಳು ನಡೆದವು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಮೌನೇಶ್ ವಿಶ್ವಕರ್ಮ ಸಾಲವಾಡಗಿ ಮಾತನಾಡಿ, ಸಮಾಜದ ಏಕತೆ ಮತ್ತು ಸಂಘಟಿತ ಶಕ್ತಿ ಅತ್ಯಂತ ಮುಖ್ಯವಾಗಿದ್ದು, ಹೊಸದಾಗಿ ಆಯ್ಕೆಯಾದ ತಾಲೂಕು ಅಧ್ಯಕ್ಷರು ಸಮಾಜದ ನಿರೀಕ್ಷೆಗಳನ್ನು ಈಡೇ-ರಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ತಿಳಿಸಿದರು. ರಾಜ್ಯ ನಿರ್ದೇಶಕ ಅಂಬಣ್ಣ ಸಾಹುಕಾರ ಮದ್ಲಾಪೂರ್ ಸಹ ಸಮಾಜದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸುವಂತೆ ಕರೆ ನೀಡಿದರು. ಸಭೆಯಲ್ಲಿ ಯುವ ಘಟಕದ ಜಿಲ್ಲಾಧ್ಯಕ್ಷ ಬಿ.ವೀರೇಶ್, ಸಮಾಜದ ಮಾಜಿ ತಾಲೂಕು ಅಧ್ಯಕ್ಷ ಸತೀಶ್ ಆಚಾರ್, ಗವಿಯಪ್ಪ ಆಚಾರ್, ಜಿ.ಎಸ್.ಅಂಬಣ್ಣ ಆಚಾರ್, ಷಣ್ಮುಖ ಆಚಾರ್ ಅಡಿಟರ್ ಜಿಕಲಪರ್ವಿ, ಮನೋಹರ ಆಚಾರ್ ವಕೀಲರು, ತಿರುಮಲ ಆಚಾರ್, ಗದ್ವಾಲ್ ವೆಂಕಟೇಶ್ ಆಚಾರ್, ಕೆ.ಮಲ್ಲಿಕಾರ್ಜುನ್ ಆಚಾರ್, ಧನುಂಜಯ ಆಚಾರ್, ವಿ.ಮೋಹನ್ ಆಚ-ಾರ್, ಗ್ಯಾನಪ್ಪ ಆಚಾರ್, ಜೆ.ನಾಗರಾಜ್ ಆಚಾರ್, ಶಿವಪ್ಪ ಆಚಾರ್, ಕೆ.ಮಹೇಶ ಆಚಾರ್, ಸುಗಪ್ಪ ಆಚಾರ್, ಪಾಂಡುರಂಗ ಆಚಾರ್, ವೆಂಕಟೇಶ್ ಆಚಾರ್, ವರ್ಮಾ ಮೌನೇಶ್ ಆಚಾರ್, ವೀರೇಂದ್ರ ಆಚಾರ್, ಶಂಕ್ರಪ್ಪ ಆಚಾರ್, ರಮೇಶ್ ಆಚಾರ್, ಕೆಂಚಪ್ಪ ಆಚಾರ್, ರಾಘವೇಂದ್ರ ಆಚಾರ್, ಕೆ ಮಂಜುನಾಥ್ ಆಚ-ಾರ್, ಕೆ ಆಯಪ್ಪ ಆಚಾರ್, ಎಚ್ ಮೌನೇಶ್ ಆಚಾರ್, ವೀರಭದ್ರ ಆಚ-ಾರ್, ನಾಗಪ್ಪ ಬಡಿಗೇರ್ ಆಚಾರ್, ಕಾಳಪ್ಪ ಆಚಾರ್, ಮದ್ಲಾಪುರ್ ಚಂದ್ರಶೇಖರ್, ಮದ್ಲಾಪುರ್ ರಾಜಶೇಖರ್, ಶಿವಕುಮಾರ್ ಆಚಾರ್ ನೀರಮಾನ್ವಿ, ಗಂಗಾಧರ ಆಚ-ಾರ್ ಕನಕಗಿರಿ, ಕಾಳಪ್ಪ ಕನಕಗಿರಿ, ನರಸಪ್ಪ ಆಚಾರ್, ತಿಪ್ಪಣ್ಣ ಆಚಾರ್, ಸುರೇಶ್ ಆಚಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸ್ವಚ್ಚತೆ,ಆರೋಗ್ಯ, ಪರಿಸರ, ಭವಿಷ್ಯದ ಭಾರತಕ್ಕೆ ಬಳಗಾನೂರಿನ ವಿದ್ಯಾರ್ಥಿಗಳ ಕಂಕಣಬದ್ದ ಪ್ರತಿಜ್ಞೆ

ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಪಟ್ಟಣದ ಸರಕಾರಿ ಪ್ರೌಢಶಾಲೆಯಲ್ಲಿ ಮಂಗಳವಾರ ಮಧ್ಯಾಹ್ನ ಸುಂದರಲಾಲ್ ಬಹುಗುಣ ಇಕೋ ಕ್ಲಬ್ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ, ಆರೋಗ್ಯ ಮತ್ತು ಸ್ವಚ್ಚತೆ ಕು-ರಿತು ಜಾಗೃತಿ ಮೂಡಿಸುವ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು.ಆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಬಳಗಾನೂರು ಪಟ್ಟಣ ಪಂಚಾಯ್ತಿಯ ಸಮುದಾಯ ಸಂಚಾಲಕಿಯರಾದ ಗೀತಾ ಸುರೇಶ್ ಮತ್ತು ದುರುಗಮ್ಮ ವಿರುಪಾಕ್ಷಿ ಭಾಗವಹಿಸಿದ್ದರು.

ದುರುಗಮ್ಮ ವಿರುಪಾಕ್ಷಿ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಪ್ರತಿಜ್ಞಾವಿಧಿಯನ್ನು ಬೋಧಿಸಿ, ಸ್ವಚ್ಚತೆಯ ಮಹತ್ವವನ್ನು ತಿಳಿಸಿದರು.ಗೀತಾ ಸುರೇಶ್ ಮಾತನಾಡಿ, "ಪರಿಸರ ಇದ್ದರೆ ನಾವು ಇರುತ್ತೇವೆ.ಪರಿಸರವೇ ಮಾನವ ಜೀವನದ ಮೂಲಾಧಾರ.ವಿದ್ಯಾರ್ಥಿಗಳು ಸ್ವಚ್ಚತೆ, ಆರೋಗ್ಯ ಮತ್ತು ಪರಿಸರದ ರಕ್ಷಣೆಯ ಹೊಣೆ ಹೊತ್ತು, ಮನೆಯಲ್ಲಿ ಹಾಗೂ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು" ಎಂದು ಪ್ರೇರಣಾದಾಯಕ ಸಂದೇಶ ನೀಡಿದರು. ನಂತರ ಸಹಶಿಕ್ಷಕಿ ಸುನಿತಾ ಮಾತನಾಡಿ, "ಪರಿಸರ ಮತ್ತು ಮಾನವನ ನಡುವೆ ಆದಿಕಾಲದಿಂದಲೂ ಅವಿನಾಭಾವ ಸಂಬಂಧವಿದೆ. ಪರಿಸರ ನಾಶವೇ ಮಾನವಕುಲದ ವಿನಾಶ" ಎಂದು ಎಚ್ಚರಿಸಿದರು.ಅತಿಥಿ ಶಿಕ್ಷಕ ಬಸವರಾಜ ಪೂಜಾರಿ ಇಂದಿನ ವಿದ್ಯಾರ್ಥಿಗಳೇ ನಾಳಿನ ಭವ್ಯ ಭಾರತದ ಶಿಲ್ಪಿಗಳು. ದೇಶದ ನೆಲ, ಜಲ, ಪರಿಸರ ಸಂರಕ್ಷಣೆ ಅವರ ಹೊಣೆಗಾರಿಕೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯಿನಿ ಮಹಾದೇವಮ್ಮ ವಹಿಸಿದ್ದರು.ವಿದ್ಯಾರ್ಥಿನಿ ಗಾಯತ್ರಿ ಮ-ರಿಸ್ವಾಮಿ ಪ್ರಾರ್ಥಿಸಿದರು.ಅತಿಥಿ ಶಿಕ್ಷಕ ಕಾರ್ತಿಕ್ ಸ್ವಾಗತಿಸಿದರು.ಬಸವರಾಜ ಪೂಜಾರಿ ವಂದಿಸಿದರು.ಇಕೋ ಕ್ಲಬ್ ಮಾರ್ಗದರ್ಶಕ ಶಿಕ್ಷಕರಾದ ಎಮ್. ರಫಿಯುದ್ದೀನ್ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಈ ಸಂದರ್ಭದಲ್ಲಿ ಶಿಕ್ಷಕಿ ಶ್ವೇತಾ, ಕರಣಿಕ ಶ್ರೀನಿವಾಸ ಕುಲಕರ್ಣಿ ಸೇರಿದಂತೆ ಬೋಧಕೇತರ ಸಿಬ್ಬಂದಿ ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸ್ವಚ್ಚತೆ, ಆರೋಗ್ಯ ಮತ್ತು ಪರಿಸರ ರಕ್ಷಣೆಯ ಸಂದೇಶ ಸಾರಿದ ಈ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಹೊಸ ಜಾಗೃತಿ ಮೂಡಿಸಿತು.